ಅಖಿಲ ಕರ್ನಾಟಕ


# ಶಿಕ್ಷಕ ಸಮಾಚಾರ

ಜನವರಿ 2020 ಮಾಸ ಪತ್ರಿಕೆ

ಸಂಪುಟ/Volume : 42
ಸಂಚಿಕೆ/Issue : 4
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | January 2020 | Monthly







A Journal of Karnataka State Secondary Teachers' Association

## ಸಂಪಾದಕೀಯ

### ನಮ್ಮೆಲ್ಲಾ ಓದುಗರಿಗೆ ಸಂಕ್ರಾಂತಿಯ ಶುಭಾಕಾಮನೆಗಳು

ಡಿಸೆಂಬರ್ 29 ರಂದು ಪೂರ್ವಾಹ್ನಾ 9.30 ರಲ್ಲಿ ಯತಿಶ್ರೇಷ್ಠ ಪೇಜಾವರ ಮಠಾಧೀಶರಾದ ಪೂಜ್ಯ ಶ್ರೀ ವಿಶ್ವೇಶ್ವರತೀರ್ಥರು ವೈಕುಂಠದತ್ತ ಪಯಣ ಬೆಳೆಸಿದರು ಎಂಬುದನ್ನು ತಿಳಿದು ಕೋಟ್ಯಂತರ ಜನ ಕಣ್ಣೀರಿಟ್ಟರು. ಕಾರಣ ಅವರು ಒಂದು ಪಂಥಕ್ಕೆ, ಒಂದು ಮಠಕ್ಕೆ, ಒಂದು ಪ್ರದೇಶಕ್ಕೆ ಸೀಮಿತಗೊಂಡ ಯತಿಗಳಾಗಿರಲಿಲ್ಲ. ಬದಲಾಗಿ ಕನ್ಯಾಕುಮಾರಿಯಿಂದ- ಕಾಶ್ಮೀರದವರೆಗಿನ ಎಲ್ಲ ಮತ, ಪಂಥ, ಜಾತಿಗಳ ಜನರಿಗೆ ಇವ ತಮ್ಮವ ಎಂಬಂತಿದ್ದರು. ಸಮಾಜದ ಕಟ್ಟಕಡೆಯ ವ್ಯಕ್ತಿಯ ದುಃಖ ದುಮ್ಮಾನಗಳಿಗೆ ಮಿಡಿಯುತ್ತಿದ್ದರು. ಹಿಂದು ಧರ್ಮದ ಅತಿದೊಡ್ಡ ಪಿಡುಗಾಗಿದ್ದ ಅಸ್ಪೃಶ್ಯತೆಯ ನಿವಾರಣೆಗಾಗಿ ಕಟಿಬದ್ಧರಾದ ಏಕೈಕ ಸನ್ಯಾಸಿ ಪೇಜಾವರ ಮಠಾಧೀಶರು. ಅರವತ್ತರ ದಶಕದಲ್ಲೇ ಬೆಂಗಳೂರಿನ ಉತ್ತರ ಭಾಗದ ವೈಯ್ಯಾಲಿಕಾವಲ್‌ನ ಹರಿಜನ ಬಸ್ತಿಯಲ್ಲಿ ಪಾದಯಾತ್ರೆ ಮಾಡಿದವರು. ಕೊಪ್ಪಳದ ಚಂದ್ರಪ್ಪ ಎಂಬ ಹರಿಜನರ ಮನೆಯಲ್ಲಿ ಸತ್ಯ ನಾರಾಯಣ ಪೂಜೆ ತಾವೇ ಖುದ್ದು ಮಾಡಿದರು. ಅದೇ ವರ್ಷ ಉಡುಪಿಯ ಪರ್ಯಾಯ ಪೀಠದಲ್ಲಿದ್ದಾಗ "ನಃ ಹಿಂದು ಪತಿತೋಭವೇತ್" ಎಂದು ಕರೆನೀಡಿದರು. ಸಂತರಾದರೂ ಸಾಮಾಜಿಕ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಪ್ರವಾಹ ಬಂದಾಗಿರಲಿ, ಸುನಾಮಿ ಬಂದಾಗಿರಲಿ ನೊಂದವರ ಕಷ್ಟಕ್ಕೆ ಮರುಗಿ ಅವರ ಸೇವೆಗೆ ನಿಂತವರು. 1975 ರಲ್ಲಿ ಇಂದಿರಾ ಹೇರಿದ್ದ ತುರ್ತುಪರಿಸ್ಥಿತಿಯನ್ನು ಪರಿಣಾಮದ ಆತಂಕವಿಲ್ಲದೆ ಎದುರಿಸಿದವರು. ತಮಿಳುನಾಡಿನ ಮೀನಾಕ್ಷಿಪುರಂದಲ್ಲಿ ಮಿಷನರಿಗಳು ಮತಾಂತರ ಮಾಡಲು ತೊಡಗಿದಾಗ ಕೆರಳಿ ನಿಂತು ಹಿಂದುಗಳನ್ನು ಮತ್ತೆ ಮಾತೃ ಧರ್ಮಕ್ಕೆ ಬರಮಾಡಿಕೊಂಡು ಅವರು ಬದುಕನ್ನು ಕಟ್ಟಿಕೊಳ್ಳಲು ನೆರವು ನೀಡಿದವರು. ಹೀಗಾಗೇ ಕೋಟ್ಯಂತರ ಜನರು ಅವರ ನಿಧನಕ್ಕೆ ಮರುಗಿದ್ದು.

ವಾಮನಮೂರ್ತಿಯಂತಿದ್ದರೂ, ತ್ರಿವಿಕ್ರಮನಷ್ಟು ಕೆಲಸಮಾಡಿದರು. ಅವರು ನಡೆಯುತ್ತಿರಲಿಲ್ಲ ಓಡುತ್ತಿದ್ದರು. ಕಾರಣ ಹತ್ತಾರು ಕೆಲಸಗಳನ್ನು ಮುಗಿಸಲು ಅವರಿಗೆ 24 ಗಂಟೆ ಸಾಲುತ್ತಿರಲಿಲ್ಲ. ಧಾವಂತದ ಸಂತ ಎಂದರೆ ಅವರಿಗೆ ಅನ್ವರ್ಥನಾಮವಾದೀತು.

ಇಂದು ಪೇಜಾವರರು ನಮ್ಮೊಡನಿಲ್ಲ. ಆದರೆ ಅವರ ಬದುಕಿನ ಆದರ್ಶಗಳು ನಮ್ಮ ಮುಂದಿದೆ. ಅವರಿಟ್ಟ ಮಾರ್ಗದಲ್ಲಿ ಹೆಜ್ಜೆ ಇಟ್ಟು ನಡೆವ ಸಂಕಲ್ಪಮಾಡಿ, ಅದರಂತೆ ನಡೆದರೆ ನಾವು ದಿಟವಾಗಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದಂತೆ.

40 ವರ್ಷಗಳಿಂದಲೂ ಕನ್ನಡಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡು, ಕನ್ನಡ ಶಕ್ತಿ ಕೇಂದ್ರದ ಮೂಲಕ ಕನ್ನಡಿಗರನ್ನು ಸಂಘಟಿತರನ್ನಾಗಿಸುವ ಕೆಲಸ ಮಾಡಿದ ಲೇಖಕ, ಚಿಂತಕ, ಸಂಶೋಧಕ ಮತ್ತು ಇತಿಹಾಸಕಾರ ನಾಡೋಜ ಚಿದಾನಂದ ಮೂರ್ತಿಯವರು ಇನ್ನಿಲ್ಲ ಎಂಬ ವಿಷಯ ದುಃಖ ತರುವಂತಹದು. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಸಿಗುವಲ್ಲಿ ಹಾಗೂ ಹಂಪೆಯ ಸ್ಮಾರಕಗಳನ್ನು ಉಳಿಸುವಲ್ಲಿ ಇವರ ಪ್ರಯತ್ನ ಎಂದಿಗೂ ಸ್ಮರಣೀಯ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು 2017ರಲ್ಲಿ ಬೆಂಗಳೂರಿನಲ್ಲಿ ಜರುಗಿದ ರಾಷ್ಟ್ರಮಟ್ಟದ 'ಶಿಕ್ಷಾ ಭೂಷಣ' ಪ್ರಶಸ್ತಿಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಶ್ರೀ ಭಯ್ಯಾಜೀ ಜೋಶಿಯವರಿಂದ ಶ್ರೀ ಚಿದಾನಂದ ಮೂರ್ತಿಯವರಿಗೆ ಕೊಡಲಾಯಿತು. ಕನ್ನಡ ಭಾಷೆ, ನಾಡು, ನುಡಿಯನ್ನು ಮೇಲ್ಪಂಕ್ತಿಗೆ ತೆಗೆದುಕೊಂಡು ಹೋಗುವಲ್ಲಿ ಪ್ರತಿಯೊಬ್ಬ ಕನ್ನಡಿಗನೂ ಪ್ರಾಮಾಣಿಕವಾಗಿ ಪ್ರಯತ್ನಿಸಿದಲ್ಲಿ ಮಾತ್ರ ಇವರಿಗೆ ಶ್ರದ್ಧಾಂಜಲಿ ಅರ್ಪಿಸಿದಂತೆ,

ಸಂಪಾದಕ

## ಸೂಕ್ತಿ



ಸೋದರರೇ, ನಾವೆಲ್ಲರೂ ಶ್ರಮವಹಿಸಿ ದುಡಿಯೋಣ. ನಿದ್ರೆಗಿದು ಸಮಯವಲ್ಲ. ನಮ್ಮ ಇಂದಿನ ಕಾರ್ಯದ ಮೇಲೆ ಭಾವೀ ಭಾರತ ನಿಂತಿದೆ. ಏಳಿ,ಎಚ್ಚರಗೊಳ್ಳಿ ; ನಮ್ಮ, ಭಾರತಮಾತೆಯು ಹಿಂದೆಂದಿಗಿಂತ ವೈಭವಯುತಳಾಗಿ, ಶೋಭಾಯಮಾನವಾದ ತನ್ನ ಸಿಂಹಾಸನದ ಮೇಲೆ ವಿರಾಜಿಸುವುದನ್ನು ನೋಡಿ.

- ಸ್ವಾಮಿ ವಿವೇಕಾನಂದ

## ಪರಿವಿಡಿ


- CAA ಮತ್ತು NRC ಯನ್ನು ಏಕೆ ಸಮರ್ಥಿಸಬೇಕು? 3
- ಗುರು-ಶಿಷ್ಯರ ಅನುಬಂಧ ಹೇಗಿರಬೇಕು 5
- ಸಾಮಾಜಿಕ ಕಳಕಳಿಯ ಮೊದಲ ಶಿಕ್ಷಕಿ 6
- ಸಂಘದ ವಾರ್ತೆ 7
- ಶಿಕ್ಷಕ ಸಂಘದಿಂದ ವಿನೂತನ ಪ್ರಯೋಗ 8
- ಗೆಂದಾಲಾಲ್ ದಿಕ್ಷಿತ್ ಅಪರೂಪದ ಅಜ್ಞಾತ ಕ್ರಾಂತಿಕಾರಿ 9
- ಬೆಳೆಯುವ ಸಿರಿ ಮೊಳಕೆಯಲ್ಲಿ 10
- ಚಿತ್ರಸುದ್ದಿ 11

# CAA ಮತ್ತು NRC ಯನ್ನು ಏಕೆ ಸಮರ್ಥಿಸಬೇಕು?

**ಡಾ|| ಟಿ. ಎನ್. ಲೋಕೇಶ್**
**ಪ್ರಾಧ್ಯಾಪಕರು ಮತ್ತು ಚಿಂತಕರು**



"ದೇಶ ಮೊದಲು, ವ್ಯಕ್ತಿ ನಂತರ"

"ವ್ಯಕ್ತಿ ಹಿತಕ್ಕಿಂತ ದೇಶದ ಹಿತ ಅಗ್ರಗಣ್ಯವಾದದ್ದು."

ಪೌರತ್ವ ತಿದ್ದುಪಡಿ ಕಾಯ್ದೆ–2019ರ ಸಂಕ್ಷಿಪ್ತ ರೂಪವೇ 'ಸಿಎಎ'. ಭಾರತದ ಮೂರು ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ಘಾನಿಸ್ತಾನದಿಂದ ಧಾರ್ಮಿಕ ಕಿರುಕುಳಕ್ಕೆ ಸಿಲುಕಿ ಅಥವಾ ಕಿರುಕುಳದ ಭೀತಿಯಿಂದ ಪಲಾಯನ ಮಾಡಿದ ಧಾರ್ಮಿಕ ಅಲ್ಪಸಂಖ್ಯಾತರಿಗೆ ಭಾರತೀಯ ಪೌರತ್ವ ನೀಡುವುದರ ಬಗ್ಗೆ ಪ್ರಸ್ತಾಪಿಸುವ ಕಾಯ್ದೆ ಸಿಎಎ–2019. ಪೌರತ್ವ ತಿದ್ದುಪಡಿ ಕಾಯ್ದೆ ಸಿಎಎ–2019ರ ಅಡಿಯಲ್ಲಿ ಹಿಂದೂ, ಸಿಖ್ ಕ್ರಿಶ್ಚಿಯನ್, ಜೈನ್, ಬೌದ್ಧ ಮತ್ತು ಪಾರ್ಸಿ ಸಮುದಾಯಕ್ಕೆ ಸೇರಿದ ಅಲ್ಪಸಂಖ್ಯಾತರನ್ನು ಭಾರತೀಯ ಪೌರತ್ವಕ್ಕೆ ಅರ್ಹರೆಂದು ಪರಿಗಣಿಸಲಾಗುತ್ತದೆ.

ಸಿಎಎ ಕಾಯ್ದೆ ಭಾರತದ ಸನಾತನ ಭವ್ಯ ಸಂಸ್ಕೃತಿಯಲ್ಲಿನ ಉದಾತ್ತ ಮೌಲ್ಯಗಳ ಅನಾವರಣದ ಒಂದು ನಿದರ್ಶನದ ತುಣುಕು ಅಷ್ಟೆ ಅನಾದಿ ಕಾಲದಿಂದಲೂ ಭಾರತೀಯ ಸಮಾಜ ಬಹುತ್ವದ ಜೀವಂತ ಪ್ರತಿರೂಪ. 'ಸ್ವೀಕಾರತೆ' 'ಸಮನ್ವಯತೆ', 'ದಯೆ', 'ಭ್ರಾತೃತ್ವ' ಇವು ನಮ್ಮ ರಾಷ್ಟ್ರೀಯ ಆಸ್ಮಿತೆಯ ಆಯಾಮಗಳೆಂದರೆ ಅತಿಶಯೋಕ್ತಿಯಲ್ಲ. ಆದ್ದರಿಂದಲೇ ಸೆಪ್ಟೆಂಬರ್ 11, 1893ರಲ್ಲಿ ಅಮೇರಿಕಾದ ಚಿಕಾಗೋ ಧರ್ಮಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ ಚಾರಿತ್ರಿಕ ಭಾಷಣದಲ್ಲಿ 'ಧಾರ್ಮಿಕ ಸಹಿಷ್ಣತೆ', 'ಸಹನೆ' ಮತ್ತು 'ಧರ್ಮಗಳು' ಸ್ವೀಕಾರಯೋಗ್ಯ ಎಂಬುದನ್ನು ಜಗತ್ತಿಗೆ ಭೋದಿಸಿದ ರಾಷ್ಟ್ರ ಭಾರತ. ಭಾರತೀಯರಾದ ನಮಗೆ ಪರಧರ್ಮ ಸಹಿಷ್ಣತೆಯಲ್ಲಿ ನಂಬಿಕೆ ಇದೆ ಹಾಗೆಯೇ ಎಲ್ಲಾ ಧರ್ಮಗಳಲ್ಲಿ ಯಾರು ಯಾರು ಹಿಂಸೆಗೆ ಒಳಗಾದ ಧಾರ್ಮಿಕ ನಿರಾಶ್ರಿತರಿಗೆ ಆಶ್ರಯವನ್ನು ನೀಡಿದ ದೇಶವೇ ಭಾರತ ಎಂದು ಸಾರಿದರು. ಅವರ ಈ ನುಡಿಗಳು ಪ್ರಸಕ್ತ ಸಿಎಎ ಕಾಯ್ದೆಯನ್ನು ವಿರೋಧಿಸುತ್ತಿರುವ ಹುಚ್ಚು ಮನಸ್ಥಿತಿಯವರಿಗೆ ಇದು ಅತ್ಯುತ್ತಮ ರೋಗ ನಿವಾರಕ ಔಷಧಿಯಂದೇ ಭಾವಿಸಬಹುದಾಗಿದೆ. ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ಘಾನಿಸ್ಥಾನದಲ್ಲಿ ಹಿಂದೂಗಳ ಧಮನೀಯ ಪರಿಸ್ಥಿತಿ ಅಧೋಗತಿಗೆ ಇಳಿದಿರುವುದು ದುರಾದೃಷ್ಟಕರ. ಆದರೆ ಅದೇ ಸತ್ಯ. ಸ್ವಾತಂತ್ರ್ಯ ಗಳಿಕೆಯ ನಂತರ ಭಾರತ ತನ್ನನ್ನು ಧರ್ಮನಿರಪೇಕ್ಷ ರಾಷ್ಟ್ರವೆಂದು ಘೋಷಿಸಿಕೊಂಡಿದೆ. ಆದರೆ ಪಾಕಿಸ್ತಾನ ಭಾರತದಿಂದ ವಿಭಜನೆ ಆದ ನಂತರ 'ಇಸ್ಲಾಂ ಧರ್ಮದ ಆಧಾರದ ಮೇಲೆ ತನ್ನನ್ನು 'ಇಸ್ಲಾಮಿಕ್ ಸ್ಟೇಟ್' ಎಂದು ಘೋಷಿಸಿಕೊಂಡಿದೆ. ಹಾಗೆಯೇ ಆಫ್ಘಾನಿಸ್ತಾನ ಮತ್ತು ಬಾಂಗ್ಲಾದೇಶಗಳಲ್ಲಿ 'ಇಸ್ಲಾಂ' ಪ್ರಧಾನ ಧರ್ಮವಾಗಿದ್ದು ಇತರೆ ಧರ್ಮದವರನ್ನು ಎರಡನೆಯ ದರ್ಜೆಯ ಧರ್ಮದವರೆಂದು ಕೀಳಾಗಿ ಕಾಣುವ ವಾಸ್ತವ ಮನಸ್ಥಿತಿ ಇಂದಿಗೂ ಚಾಲ್ತಿಯಲ್ಲಿದೆ. ಈ ಮೂರು ದೇಶಗಳಲ್ಲಿನ ಧಾರ್ಮಿಕ ಅಲ್ಪಸಂಖ್ಯಾತರಾದ ಹಿಂದೂ, ಸಿಖ್, ಕ್ರಿಶ್ಚಿಯನ್, ಜೈನ್, ಬೌದ್ಧ ಮತ್ತು ಪಾರ್ಸಿಗಳನ್ನು ಸಹಿಷ್ಣತೆಯಿಂದ ನಡೆಸಿಕೊಂಡ ನಿದರ್ಶನಗಳು ಅತ್ಯಂತ ವಿರಳ! ಈ ಮೂರು ರಾಷ್ಟ್ರಗಳು ಇತರೇ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದ ಮೇಲೆ ನಡೆಸಿದ ದೌರ್ಜನ್ಯ ಅಟ್ಟಹಾಸ, ಕಗ್ಗೊಲೆ, ದಮನಕಾರಿ ಆಕ್ರಮಣ, ಗಲ್ಲುಶಿಕ್ಷೆ ಹಾಗೂ ಪ್ರಾರ್ಥನಾ ಮಂದಿರಗಳ ಧ್ವಂಸದಂತಹ ಬರ್ಬರ ಹೇಯ ಕೃತ್ಯಗಳು ನಾಗರೀಕ ಮಾನವ ಜನಾಂಗದ ವಿಕಾಸದ ಇತಿಹಾಸದಲ್ಲಿನ ಕಪ್ಪು ಚುಕ್ಕೆಗಳೇ ಸರಿ! ಧಾರ್ಮಿಕ ಅಲ್ಪಸಂಖ್ಯಾತರನ್ನು 'ಧರ್ಮದ್ರೋಹ'ದ ಆಪಾದನೆ ಹೊರಿಸಿ ನಡೆಸಿದ 'ನರಮೇಧ', ಸಾಮೂಹಿಕ ಹಿಂಸಾಚಾರ ಮತ್ತು ಗಡಿಪಾರಿಗೆ ಇಲ್ಲಿಯವರೆಗೆ ಶಾಶ್ವತ ಪರಿಹಾರ ದೊರಕಿಲ್ಲ. ತತ್ಪರಿಣಾಮವಾಗಿ ಈ ಮೂರು ದೇಶಗಳಲ್ಲಿನ ಹಿಂದೂಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತಿರುವುದು ಅಂಕಿ– ಅಂಶಗಳಿಂದ ದೃಢಪಟ್ಟ ಸತ್ಯಾಂಶವಾಗಿದೆ. ಈ ಮೂರು ದೇಶಗಳಿಂದ ಹೊರದೂಡಲ್ಪಟ್ಟ ಧಾರ್ಮಿಕ ಅಲ್ಪಸಂಖ್ಯಾತರಿಗೆ ಭಾರತಕ್ಕೆ ಬರುವುದನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲ. ಆದ್ದರಿಂದ ಅಂತವರು ಭಾರತೀಯ ಪೌರತ್ವ ಪಡೆಯಲು ಅರ್ಹರಾಗಿರುತ್ತಾರೆ.

ಪಾಕಿಸ್ತಾನ, ಆಫ್ಘಾನಿಸ್ತಾನ ಮತ್ತು ಬಾಂಗ್ಲಾ ದೇಶಗಳನ್ನು ಹೊರತುಪಡಿಸಿ ಜಗತ್ತಿನ ಇತರೇ ದೇಶಗಳಲ್ಲಿ ವಾಸಿಸುತ್ತಿರುವ ಧಾರ್ಮಿಕ ಅಲ್ಪಸಂಖ್ಯಾತರು ಸಿಎಎ ಅಡಿಯಲ್ಲಿ ಭಾರತೀಯ ಪೌರತ್ವಕ್ಕೆ ಅರ್ಜಿಸಲ್ಲಿಸಲು ಅರ್ಹರಾಗಿರುವುದಿಲ್ಲ ಎಂದು ಕೇಂದ್ರ ಗೃಹಸಚಿವಾಲಯ ಸ್ಪಷ್ಟಪಡಿಸಿದೆ. ಇಂತಹವರು ಪ್ರಸ್ತುತ ಯಾವುದೇ ವಿದೇಶಿಯರು ಭಾರತೀಯ ಪೌರತ್ವ ಪಡೆಯಲು ಇರುವ ಕಾನೂನು ಪ್ರಕ್ರಿಯೆಯ ಮೂಲಕ ಅರ್ಜಿ ಸಲ್ಲಿಸಬಹುದು. ಇಂತಹವರಿಗೆ ಸಿಎಎ ಕಾಯ್ದೆಯ ಅಡಿ ಯಾವುದೇ ಆದ್ಯತೆ/ ವಿನಾಯತಿ ಇರುವುದಿಲ್ಲ.

ಸಿಎಎ ಕಾಯ್ದೆಯು ಮುಸ್ಲಿಂರು ಸೇರಿದಂತೆ ಯಾವುದೇ ಭಾರತೀಯ ನಾಗರೀಕರ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯ ಸ್ಪಷ್ಟಪಡಿಸಿದೆ. ಮುಸ್ಲಿಂ ಸೇರಿದಂತೆ ಸಮಸ್ತ ಭಾರತೀಯ ನಾಗರೀಕರು ಭಾರತ ಸಂವಿಧಾನ ಕೊಡಮಾಡಿರುವ ಮೂಲಭೂತ ಹಕ್ಕುಗಳನ್ನು ಅನುಭವಿಸಲು ಅರ್ಹರಾಗಿರುತ್ತಾರೆ. ಸಿಎಎ ಯಾವುದೇ ಭಾರತೀಯ ನಾಗರೀಕರಿಗೆ ಅನ್ವಯಿಸುವುದಿಲ್ಲ ಮತ್ತು ಯಾವುದೇ ಭಾರತೀಯ ನಾಗರೀಕನ ಪೌರತ್ವವನ್ನು ಕಸಿದುಕೊಳ್ಳುವ ಉದ್ದೇಶ ಹೊಂದಿಲ್ಲ. ಪಾಕಿಸ್ತಾನ, ಆಫ್ಘಾನಿಸ್ತಾನ ಮತ್ತು ಬಾಂಗ್ಲಾ ದೇಶಗಳಲ್ಲಿ ಧಾರ್ಮಿಕ ಕಿರುಕುಳ ಎದುರಿಸುತ್ತಿರುವ ಕೆಲವು ಧಾರ್ಮಿಕ ಅಲ್ಪಸಂಖ್ಯಾತ ವಿದೇಶಿಯರಿಗೆ ಭಾರತೀಯ ಪೌರತ್ವ ಪಡೆಯಲು ಇರುವ ವಿಶೇಷ ಕಾನೂನಿನ ಸವಲತ್ತೆ 'ಸಿಎಎ'.

ಭಾರತದಿಂದ ವಿದೇಶಿಯರ ಗಡಿಪಾರು ಮತ್ತು ಸಿಎಎಗೆ ಯಾವುದೇ ಸಂಬಂಧವಿಲ್ಲ. ವಿದೇಶಿಯರು ಗಡಿಪಾರು ಪ್ರಕ್ರಿಯೆ ಭಾರತದಲ್ಲಿನ ವಿದೇಶಿಯರ ಕಾಯ್ದೆ 1946 ಮತ್ತು ಪಾಸ್‌ಪೋರ್ಟ್ ಕಾಯ್ದೆ–1920 ರ ಅನ್ವಯ ಮೂಲದೇಶ ಅಥವಾ ಧರ್ಮವನ್ನು ಲೆಕ್ಕಿಸದೆ ಎಲ್ಲಾ ವಿದೇಶಿಯರ ಪ್ರವೇಶ, ವಾಸ್ತವ್ಯ ಮತ್ತು ನಿರ್ಗಮನವನ್ನು ನಿಯಂತ್ರಿಸುತ್ತದೆ. ಆದ್ದರಿಂದ ಭಾರತದಲ್ಲಿ ಅಕ್ರಮವಾಗಿ ಉಳಿದುಕೊಂಡಿರುವ ವಿದೇಶಿಯರಿಗೆ ಸಾಮಾನ್ಯ ಗಡಿಪಾರು ಪ್ರಕ್ರಿಯೆ ಅನ್ವಯಿಸುತ್ತದೆ.

ಪುಟ 4 ಕ್ಕೆ ➤

➤ ಪುಟ 3 ರಿಂದ..... ಸಿಎಎ ಮತ್ತು ಎನ್‌ಆರ್‌ಸಿ...

ಧಾರ್ಮಿಕ ಅಲ್ಪಸಂಖ್ಯಾತರು 2014 ಡಿಸೆಂಬರ್ 31 ಅಥವಾ ಅದಕ್ಕೂ ಮೊದಲು ಭಾರತಕ್ಕೆ ಪ್ರವೇಶಿಸಿದ್ದರೆ ಭಾರತೀಯ ಪೌರತ್ವ ಪಡೆಯಲು ಅರ್ಹರಾಗಿರುತ್ತಾರೆ. ಹಿಂದಿನ ಪೌರತ್ವ ಮಾನದಂಡಗಳ ಪ್ರಕಾರ ಕನಿಷ್ಠ 11 ವರ್ಷಗಳ ಕಾಲ ಭಾರತದಲ್ಲಿ ಕಡ್ಡಾಯವಾಗಿ ವಾಸವಿದ್ದರೆ ಮಾತ್ರ ಭಾರತೀಯ ಪೌರತ್ವ ಪಡೆಯಲು ಅರ್ಹತೆ ಹೊಂದುತ್ತಿದ್ದರು. ಆದರೆ ಹೊಸ ಕಾಯ್ದೆ ಸಿಎಎ ಮಿತಿಯನ್ನು 11 ವರ್ಷದಿಂದ ಕೇವಲ 06 ವರ್ಷಕ್ಕೆ ಇಳಿಸಿದೆ.

ಸಿಎಎ ಜೊತೆಗೆ ಕೇಳಿಬರುತ್ತಿರುವ ಮತ್ತೊಂದು ಕಾಯ್ದೆ ಎನ್.ಆರ್.ಸಿ ಅಂದರೆ ನಾಗರೀಕ ರಾಷ್ಟ್ರೀಯ ನೊಂದಣಿ. ಅಕ್ರಮ ವಲಸಿಗರನ್ನು ಅವರ ಧರ್ಮಗಳ ಹೊರತಾಗಿಯೂ ಭಾರತದಿಂದ ಗಡಿಪಾರು ಮಾಡುವ ಕಾನೂನೇ ಎನ್ ಆರ್ ಸಿ.

ಎನ್‌ಆರ್‌ಸಿ ಹಾಗೂ ಧರ್ಮಕ್ಕೆ ಯಾವುದೇ ಸಂಬಂಧವಿಲ್ಲ. ಬೆಂಗಳೂರು ಒಂದರಲ್ಲೆ ಸುಮಾರು 4 ಲಕ್ಷ ಬಾಂಗ್ಲಾ ಆಕ್ರಮ ವಲಸಿಗರಿದ್ದಾರೆ. ಇಂತಹವರ ನಿಯಂತ್ರಣಕ್ಕಿರುವ ಕಾನೂನೇ ಎನ್‌ಆರ್‌ಸಿ. ಅಕ್ರಮ ವಲಸಿಗರು ಮಾರ್ಚ್24, 1971 ಅಥವಾ ಅದಕ್ಕೂ ಮೊದಲು ಅಥವಾ ಅವರ ಪೂರ್ವಜರು ಭಾರತದಲ್ಲಿ ವಾಸಿಸುತ್ತಿದ್ದರು ಎಂದು ಸಾಬೀತುಪಡಿಸುವವರನ್ನು ಎನ್‌ಆರ್‌ಸಿ ಒಳಗೊಂಡಿದೆ. ಈ ಕಾನೂನು ಮೊದಲು ಭಾರತದ ಈಶಾನ್ಯ ರಾಜ್ಯವಾದ ಅಸ್ಸಾಂನಲ್ಲಿನ ಬಾಂಗ್ಲಾದೇಶದ ಅಕ್ರಮ ವಲಸಿಗರ ನಿಯಂತ್ರಣದ ಗುರಿಹೊಂದಿತ್ತು. ಆದ್ದರಿಂದ ಸಿಎಎ ಮತ್ತು ಎನ್‌ಆರ್‌ಸಿಗೆ ಯಾವುದೇ ಸಂಬಂಧವಿಲ್ಲ.

ಸಿಎಎ ಮತ್ತು ಎನ್‌ಆರ್‌ಸಿಗಳ ಬಗ್ಗೆ ಸಕಾರಾತ್ಮಕವಾಗಿ ಚಿಂತಿಸುವ ಕಾಲ ಬಂದೊದಗಿದೆ. ಹೆಮ್ಮೆಯ ಭಾರತೀಯರಾಗಿ ಸಿಎಎಯನ್ನು ನಾವು ಬಲವಾಗಿ ಸಮರ್ಥಿಸಬೇಕು. ಈ ವಿಚಾರದಲ್ಲಿ ಕ್ಷುಲ್ಲಕ ರಾಜಕೀಯ ಹಸ್ತಕ್ಷೇಪ, ಆತಂಕ ಸೃಷ್ಟಿಸುವ ವೋಟ್‌ಬ್ಯಾಂಕ್ ರಾಜಕೀಯದ ಅಪಪ್ರಚಾರದಿಂದ ಯುವ ಜನಾಂಗ, ಪ್ರಮುಖವಾಗಿ ವಿದ್ಯಾರ್ಥಿ ಸಮುದಾಯ ದೂರ ಉಳಿದು ಅತ್ಯಂತ ಪ್ರಜ್ಞಾಪೂರ್ವಕವಾಗಿ ವರ್ತಿಸುವ ಸಮಯ ಇದಾಗಿದೆ. ಇಂತಹ ಕಾಯ್ದೆಗಳು ರಾಷ್ಟ್ರೀಯ ವಿಕಾಸಕ್ಕೆ ಪೂರಕವೇ ಹೊರತು, ಮಾರಕವಲ್ಲ ಎಂಬುದನ್ನು ಅರಿತು ನಮ್ಮ ಕರ್ತವ್ಯವನ್ನು ನಿಭಾಯಿಸಬೇಕಾಗಿದೆ. ಕಾಯ್ದೆಯ ವಿರೋಧ ದೇಶದ್ರೋಹದ ಆರೋಪಕ್ಕಿಂತಲೂ ಗಂಭೀರವಾದದ್ದು. ಆದ್ದರಿಂದ ಭಾರತೀಯರಾದ ನಾವೆಲ್ಲರು 'ಯುವಭಾರತ', 'ನವಭಾರತ' "ಪುನರುಜ್ಜೀವಿತ ಭಾರತ ಸಂಕಲ್ಪದಿಂದ ಸಿದ್ಧಿಯೆಡೆಗೆ" ಎಂಬ ಉದ್ಘೋಷ ಮಂತ್ರವನ್ನು ಸಾಕ್ಷಾತ್ಕರಿಸಿಕೊಂಡು 'ವಿಶ್ವಗುರು' ಭಾರತದ ಹೆಮ್ಮೆಯ ವಾರಸುದಾರರಾಗಿ ಗರ್ವದಿಂದ ಬಾಳೋಣ. ●

## ಸಾವಯವ ಕೃಷಿಯಿಂದ ಮತ್ತೆ ಸಮೃದ್ಧಿಗೆ ಮರಳಿದ ಬಿಹಾರದ ಗ್ರಾಮ

ಉತ್ತರ ಬಿಹಾರದ ಜಮೂಯಿ ಜಿಲ್ಲೆಯ ಕೆಡಿಯಾ ಎಂಬ ಪುಟ್ಟ ಹಳ್ಳಿಯಲ್ಲಿ 650 ಕುಟುಂಬಗಳಿವೆ. ಹೆಚ್ಚಿನವರಿಗೆ ವ್ಯವಸಾಯವೇ ಜೀವನಾಧಾರ. ಮೊದಲೇ ಕಡಿಮೆ ಮಳೆ. ಫಸಲುಗಳಿಗೆ ಆಗಾಗ ಬರುವ ಕೀಟಗಳ ಬಾಧೆ ಬೇರೆ. ಇವೆಲ್ಲಕ್ಕೆ ಕೃಷಿಕರು ನಂಬಿದ್ದು ರಾಸಾಯನಿಕಗಳನ್ನೇ. ರಾಸಾಯನಿಕ ಔಷಧಿ ಬಳಸಿದ ಹೊಸತರಲ್ಲಿ ಬೆಳೆಗಳೇನೋ ಹಸನಾಗಿ ಬಂದವು. ಆದರೆ ಬರುಬರುತ್ತಾ ಬೆಳೆಯ ಪ್ರಮಾಣ ಕುಸಿಯತೊಡಗಿತು.

ಭೂಮಿಗೆ ಸಿಂಪಡಿಸಿದ ರಾಸಾಯನಿಕಗಳು ನೆಲದ ಜೀವಸತ್ವಗಳನ್ನೇ ಸುಟ್ಟುಹಾಕಿದ್ದವು. ಇದರ ಪರಿಣಾಮವಾಗಿ ನೀರಿನ ಬೇಡಿಕೆ ಹೆಚ್ಚತೊಡಗಿತು. ಮೊದಲೆಲ್ಲ ಹೊಲದ ಬಾವಿಯಿಂದಲೇ ತೃಪ್ತಿ ಕಾಣುತ್ತಿದ್ದ ನೆಲಕ್ಕೆ ಬೋರ್‌ವೆಲ್ ಕೊರೆದರೂ ನೀರು ಸಾಲದಾಯಿತು. ಹೀಗಾಗಿ, ರೈತರ ದುಡಿಮೆಯ ಅವಧಿ ಮತ್ತು ಬೆಳೆಗಳಿಗೆ ತಗುಲುವ ಖರ್ಚುಗಳೂ ಏರತೊಡಗಿದವು. ರಾಸಾಯನಿಕಗಳ ಉಪಯೋಗದ ಕಾರಣದಿಂದ ಭೂಮಿಯ ಸತ್ವವೇ ನಷ್ಟಗೊಂಡಿತ್ತಲ್ಲದೇ ಗ್ರಾಮದ ನೀರ ಸೆಲೆಯೂ ಬತ್ತಿ ಹೋಗಿತ್ತು. ಇಂತಹ ಪರಿಸ್ಥಿತಿಯಲ್ಲಿ ರೈತರ ಸಹಾಯಕ್ಕೆ ಬಂದಿದ್ದು ಜೈವಿಕ ಕೃಷಿ ಪದ್ಧತಿ. ಹಸಿರು ಹೋರಾಟಗಾರ ಇಶ್ತಿಯಾಕ್ ಅಹ್ಮದ್ ಗ್ರಾಮಸ್ಥರಿಗೆ ಸಾವಯವ ಕೃಷಿ ಪದ್ಧತಿಯ ಬೇರೆ ಬೇರೆ ಪ್ರಯೋಗಗಳ ಕುರಿತಾಗಿ ತಿಳಿಸಿಕೊಡತೊಡಗಿದರು. ಪರಿಣಾಮವಾಗಿ ಕೆಲವೇ ಸಮಯದ ಅಂತರದಲ್ಲಿ ಕೆಡಿಯಾ ಗ್ರಾಮದ ಚಹರೆಯೇ ಬದಲಾಗಿ ಹೋಗಿದೆ. ಸಾವಯವ ಕೃಷಿ ಪದ್ಧತಿಗೆ ಮರಳಿರುವ ಅಲ್ಲಿನ ಕೃಷಿಕರ ಹೊಲಗಳಲ್ಲಿ ಈಗ ಬೆಳೆಗಳು ಮತ್ತೆ ನಳನಳಿಸುತ್ತಿವೆ. ತಾವೇ ತಯಾರಿಸಿದ ಸಾವಯವ ಗೊಬ್ಬರದ ಪ್ರಯೋಗದಿಂದ ರೈತರ ಬಹುತೇಕ ಖರ್ಚು ಮತ್ತು ಸಮಯ ಉಳಿಯುತ್ತಿದೆ. ನೀರಿನ ಬಳಕೆ ಕಡಿಮೆಯಾಗಿರುವುದರಿಂದ ಅಂತರ್ಜಲದ ಮಟ್ಟ ಸುಧಾರಿಸಿದೆ. ಕಡಿಮೆ ನೀರನ್ನು ಬಳಸಿಯೂ ಭರಪೂರ ಬೆಳೆ ಬೆಳೆಯುವ ಕಲೆ ಈಗ ಕೆಡಿಯಾದ ರೈತರಿಗೆ ಸಿದ್ಧಿಸತೊಡಗಿದೆ.

## ಪ್ಲಾಸ್ಟಿಕ್ ನಿರ್ಮೂಲನೆಗೆ ಗ್ರಾಮ ಪಂಚಾಯತಿಯ ವಿನೂತನ ಯೋಜನೆ

ಗ್ರಾಮದಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ನಿರ್ಮೂಲನೆ ಮಾಡಲು ಗದಗ ಜಿಲ್ಲೆಯ ಅಬ್ಬಿಗೇರಿ ಗ್ರಾಮ ಪಂಚಾಯತ್ ಸ್ಥಳೀಯ ಸಂಜೀವಿನಿ ಮಹಿಳಾ ಸಂಘವನ್ನು ಜೊತೆ ಸೇರಿಸಿಕೊಂಡು ಒಂದು ಹೊಸ ಯೋಜನೆಯನ್ನು ಹಾಕಿಕೊಂಡಿದೆ. ಗ್ರಾಮವನ್ನು ಪ್ಲಾಸ್ಟಿಕ್ ಮುಕ್ತವಾಗಿಸುವ ಉದ್ದೇಶದಿಂದ ಪ್ರತಿಯೊಬ್ಬ ಗ್ರಾಮಸ್ಥರಿಗೂ ಬಟ್ಟೆ ಚೀಲಗಳನ್ನು ವಿತರಿಸುತ್ತಿದೆ. ಒಂದು ತಿಂಗಳ ಹಿಂದೆ, ಗ್ರಾಮ ಪಂಚಾಯತ್ ಸದಸ್ಯರು ವಿವಿಧ ಮಹಿಳಾ ಗುಂಪುಗಳೊಂದಿಗೆ ಸಭೆ ನಡೆಸಿ ಮನೆಗಳಿಂದ ಹಳೆಯ ಬಟ್ಟೆಗಳನ್ನು ಸಂಗ್ರಹಿಸಿ ಅವುಗಳಿಗೆ ಬಣ್ಣ ಹಚ್ಚಿ, ಹಳ್ಳಿಯ ಟೈಲರ್‌ಗಳಿಂದ ಅದನ್ನು ಚೀಲಗಳಾಗಿ ಪರಿವರ್ತಿಸಿ, ಬಳಿಕ ಈ ಚೀಲಗಳನ್ನು ಗ್ರಾಮಸ್ಥರಿಗೆ ರೂ. 2ಕ್ಕೆ ವಿತರಿಸಲು ನಿರ್ಧರಿಸಿದರು. ಇದಕ್ಕೆ ಅನುಸಾರವಾಗಿ ಗ್ರಾಪಂ. ಸಿಬ್ಬಂದಿ ಮೂರು ಮಹಿಳಾ ಗುಂಪುಗಳನ್ನು ರಚಿಸಿ ಹಳೆಯ ಬಟ್ಟೆಗಳನ್ನು ಸಂಗ್ರಹಿಸಿದರು. ಅಬ್ಬಿಗೇರಿ ಗ್ರಾಮದ ಜನಸಂಖ್ಯೆಯು ಸುಮಾರು 16,000 ಆಗಿರುವುದರಿಂದ ಅವರು 15,000 ಚೀಲಗಳನ್ನು ಹೊಲಿದರು. ಪ್ರತಿ ಬ್ಯಾಗಿನಲ್ಲೂ, "ಪ್ಲಾಸ್ಟಿಕ್ ನಿರ್ಲಕ್ಷ್ಯಿಸಿ, ಪರಿಸರ ಸಂರಕ್ಷಿಸಿ" ಎಂಬ ಸಂದೇಶವನ್ನು ಬರೆಯಲಾಯಿತು. ನಂತರ ಪ್ರತಿಯೊಬ್ಬರ ಮನೆಮನೆಗೂ ತೆರಳಿ ಚೀಲಗಳನ್ನು ವಿತರಣೆ ಮಾಡಿ, ಪ್ಲಾಸ್ಟಿಕ್ ಹಾನಿಯ ಬಗ್ಗೆ ವಿವರಿಸಿ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಿದ್ದಾರೆ.

ಶೀಘ್ರದಲ್ಲೇ ಈ ಗ್ರಾಮದಲ್ಲಿ ಪ್ಲಾಸ್ಟಿಕ್ ಅನ್ನು ನಿಷೇಧ ಮಾಡುವತ್ತ ಗ್ರಾಮ ಪಂಚಾಯತ್ ಚಿಂತನೆ ಮಾಡುತ್ತಿದೆ. ಪ್ಲಾಸ್ಟಿಕ್ ನಿರ್ಮೂಲನೆಗೆ ದಿಟ್ಟ ಹೆಜ್ಜೆಯನ್ನು ಇಟ್ಟಿರುವ ಗ್ರಾಮ ಪಂಚಾಯತ್ ಕಾರ್ಯ ಮಾದರಿಯಾಗಿದೆ.

**ನಿಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಮಾಡಿ ನೀವು ಶುದ್ಧ ಚಾರಿತ್ರ್ಯವನ್ನು ರೂಢಿಸಿಕೊಳ್ಳಬೇಕು. – ಸ್ವಾಮಿ ವಿವೇಕಾನಂದ**

**ಮೌಲ್ಯೋಪಾಸನೆ**

# ಗುರು-ಶಿಷ್ಯರ ಅನುಬಂಧ ಹೇಗಿರಬೇಕು

**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ. ಪ್ರತಿಯೊಬ್ಬರ ಬದುಕಿನಲ್ಲಿ ತಾಯಿ, ತಂದೆಯ ನಂತರ ಅತಿ ಮಹತ್ತ್ವದ ಪಾತ್ರ ಗುರುವಿನದು. ಅಷ್ಟೇ ಅಲ್ಲ, ಗುರುರ್ಬ್ರಹ್ಮಾ, ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ, ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ಎಂದು ಗುರುವಿನಲ್ಲಿ ತ್ರಿಮೂರ್ತಿಗಳನ್ನೂ ಕಾಣಬೇಕೆಂಬ ಅಂಶ ನಮ್ಮ ಭಾರತೀಯ ಸಂಸ್ಕೃತಿಯಲ್ಲಿನ ಅವಿಭಾಜ್ಯ ಅಂಗವಾಗಿದೆ. ಅಂತಹ ಗುರುವಿನಲ್ಲಿ ಸದಾಕಾಲಕ್ಕೂ ಶರಣಾಗತಿಯ ಭಾವವನ್ನು ಹೊಂದಿರಬೇಕಾದುದು ಎಲ್ಲರ ಕರ್ತವ್ಯವೇ ಆಗಿರುತ್ತದೆ. ಅದೇ ರೀತಿಯಲ್ಲಿ ಗುರು-ಶಿಷ್ಯರ ನಡುವೆ ಬೆಳೆಯುವ ಪರಸ್ಪರ ಸಂಬಂಧದ ಅನುಬಂಧ, ಪ್ರೀತಿ- ವಾತ್ಸಲ್ಯಗಳೂ, ಭಕ್ತಿಗೌರವದ ಜೊತೆಜೊತೆಗೇ ತಳುಕು ಹಾಕಿಕೊಂಡಿರುತ್ತದೆ. ಇದನ್ನು ನಿರೂಪಿಸುವ ಹತ್ತಾರು ಕಥೆಗಳನ್ನು ನಮ್ಮ ಪುರಾಣಗಳಲ್ಲಿ ಕಾಣುತ್ತೇವೆ. ಬದುಕಿನಲ್ಲಿ ಅತಿ ಮುಖ್ಯವಾದ ಮೌಲ್ಯಗಳೆಲ್ಲ ಇಲ್ಲಿ ಅಡಕವಾಗಿರುತ್ತದೆ.

'ಗುರು' ಎಂದರೆ ಮಾರ್ಗದರ್ಶನ ಮಾಡುವ ಒಂದು ಮಹಾನ್ ಚೇತನ, ನಿಜ. ಆದರೆ, ಆ ಸ್ಥಾನಕ್ಕೇರುವುದು ಕೂಡ ಸುಲಭವಲ್ಲ. ಎಲ್ಲ ಬಗೆಯ ಅರ್ಹತೆಗಳನ್ನು ಹೊಂದಿದ್ದ ವ್ಯಕ್ತಿ ಮಾತ್ರ ಇಂತಹ ಆಚಾರ್ಯಪಟ್ಟಕ್ಕೇರಲು ಸಾಧ್ಯ. ಸಾರ್ಥಕ ಜೀವನವನ್ನು ಹೇಗೆ ನಡೆಸಬೇಕೆಂಬುದನ್ನು ತನ್ನ ಶಿಷ್ಯನಿಗೆ ಕೇವಲ ಉಪದೇಶದ ಮೂಲಕ ತಿಳಿಸುವುದಷ್ಟೇ ಆತನ ಕಾರ್ಯವಾಗಿರುವುದಿಲ್ಲ. ಸ್ವತಃ ತನ್ನ ಆಚರಣೆಯ ಮೂಲಕ ಅದನ್ನು ನಿರೂಪಿಸಿದಾಗಲೇ ಅಂದರೆ ನುಡಿದಂತೆ ನಡೆದು ತೋರಿಸಿದಾಗಲೇ ಆತ ಆಚಾರ್ಯನೆನಿಸಿಕೊಳ್ಳಲು ಸಾಧ್ಯವಾಗುವುದು. ಅದಕ್ಕೇ 'ಆಚಾರ್ಯ' ಪದವಿ ಬಹುದೊಡ್ಡದು ಎನ್ನುವುದು. ಅಂದ ಮೇಲೆ ಈ ಆಚಾರ್ಯರು ತನ್ನ ಜೀವನವನ್ನು ಮೌಲಿಕವಾಗಿಯೇ ನಡೆಸುತ್ತಿರುತ್ತಾರೆ. ಮಾನವೀಯ ಮೌಲ್ಯಗಳ ಮಹತ್ತ್ವವನ್ನು ಅರಿತು ಸಮಾಜಮುಖಿಯಾದ ಚಟುವಟಿಕೆಗಳನ್ನು ನಡೆಸುತ್ತ, ಕರ್ತವ್ಯಲೋಪಮಾಡದೆ, ಇತರರು ಅನುಸರಿಸುವಂತೆ ಆದರ್ಶದ ದಾರಿಯಲ್ಲಿ ಮುನ್ನಡೆಯುತ್ತಾ ಬದುಕುವವನೇ ಆಚಾರ್ಯನಾಗಿರುತ್ತಾನೆ.

ಶಿಷ್ಯನಾದವನು ತನ್ನ ಗುರುವಿನ ಸೇವೆಯನ್ನು ಎಷ್ಟು ನಿಷ್ಠೆಯಿಂದ ಮಾಡಬೇಕಾಗುತ್ತದೋ ಅದೇ ರೀತಿಯಲ್ಲಿ ಶಿಷ್ಯನಲ್ಲಿ ಗುರು ಪುತ್ರವಾತ್ಸಲ್ಯವನ್ನೇ ತೋರುತ್ತ ಆತನ ಸಂಪೂರ್ಣ ಕಾಳಜಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಶಿಷ್ಯನ ಎರಡನೇ ಮನೆಯೇ ಗುರುಕುಲವಾಗಿರುತ್ತದೆ. ಗುರು ಮತ್ತು ಗುರುಪತ್ನಿ ಮಾತಾಪಿತೃಗಳಂತೆಯೇ ಪ್ರೀತಿ ವಾತ್ಸಲ್ಯದ ಮಳೆಯನ್ನೇ ಶಿಷ್ಯರ ಮೇಲೆ ಸುರಿಸುತ್ತಾರೆ. ಗುರುಕುಲ ಪರಂಪರೆಯಲ್ಲಿ ತುಂಬಿಕೊಂಡಿರುವ ಅಂಶಗಳ ಸಾರಸರ್ವಸ್ವವೇ ಇದು. ಗುರು- ಶಿಷ್ಯರ ಸಂಬಂಧದ ಪಾವಿತ್ರ್ಯವನ್ನು ತಿಳಿಸುವ ಉದ್ದಾಲಕನ ಕಥೆ ಪುರಾಣಗಳಲ್ಲಿನ ಕಥಾಭಂಡಾರದಲ್ಲಿ ಒಂದು.

ಧೌಮ್ಯ ಎಂಬ ಋಷಿಗಳು ತಮ್ಮ ಆಶ್ರಮದಲ್ಲಿ ಅನೇಕ ಶಿಷ್ಯರಿಗೆ ವಿದ್ಯಾದಾನ ಮಾಡುತ್ತಿದ್ದರು. ಅವರಲ್ಲಿ ಒಬ್ಬ ಶಿಷ್ಯ ಉದ್ದಾಲಕ. ಅವನಿಗೆ ಅರುಣಿ ಎಂದೂ ಹೆಸರಿತ್ತು. ಎಲ್ಲ ಶಿಷ್ಯರನ್ನೂ ಸಮಾನ ಪ್ರೀತಿಯಿಂದಲೇ ಗುರುಗಳು ಕಾಣುತ್ತಿದ್ದರೂ ಉದ್ದಾಲಕನನ್ನು ಕಂಡರೆ ವಿಶೇಷ ಪ್ರೀತಿಯನ್ನು ಹೊಂದಿದ್ದರೆಂಬ ಗ್ರಹಿಕೆ ಉಳಿದ ಶಿಷ್ಯರಲ್ಲಿತ್ತು. ಉದ್ದಾಲಕನಲ್ಲಿದ್ದ ವಿಶೇಷ ಗುಣಸ್ವಭಾವ ಅವರೆಲ್ಲರ ಅರಿವಿಗೆ ಬಂದಿರಲಿಲ್ಲ. ಶಿಷ್ಯರ ಅಸಮಾಧಾನವನ್ನು ಗುರುತಿಸಿದ್ದ ಗುರುಗಳು ಅದನ್ನು ನಿವಾರಿಸಲು ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದರು. ಶಿಷ್ಯರ ವಿಚಾರ ತಪ್ಪೆಂದು ನೇರವಾಗಿ ಹೇಳಲಿಲ್ಲ.

ಒಮ್ಮೆ ಒಂದು ಸಂಧ್ಯಾಕಾಲದಲ್ಲಿ ಶಿಷ್ಯರೊಡನೆ ಕುಳಿತು ಚಿಂತನೆ ನಡೆಸುತ್ತಿರುವಾಗ ವರ್ಷಧಾರೆಯು ಪ್ರಾರಂಭವಾಯಿತು. ಅದು ಹೆಚ್ಚಾಗುವ ಸೂಚನೆಯನ್ನು ಕಂಡ ಗುರುಗಳು ಉದ್ದಾಲಕನನ್ನು ಕುರಿತು ಹೇಳಿದರು. " ವತ್ಸ, ಮಳೆ ಹೆಚ್ಚುವ ಸಂಭವವಿದೆ. ನಮ್ಮ ಹೊಲಕ್ಕೆ ನೀರು ಹೋಗಲು ಮಾಡಿರುವ ಕಾಲುವೆಯ ಕಟ್ಟೆಯು ಒಡೆದು ಹೋಗಬಹುದು. ನೀನು ಹೋಗಿ ನೋಡಿ ಅಂತಹ ಪರಿಸ್ಥಿತಿಯಿದ್ದಲ್ಲಿ ಆ ಒಡ್ಡನ್ನು ಭದ್ರಪಡಿಸಿ ಬಾ" ಎಂದು ಹೇಳಿದರು. ಅದರಂತೆ ಹೊರಟ ಉದ್ದಾಲಕನು ಹೊಲಕ್ಕೆ ಹೋಗಿ ನೋಡಿದಾಗ ಕಟ್ಟೆಯಲ್ಲಿ ಸಣ್ಣ ಬಿರುಕು ಉಂಟಾಗಿದ್ದು ಅಲ್ಲಿಂದ ನೀರು ಹೊಲಕ್ಕೆ ಸೋರಿಕೆಯಾಗುತ್ತಿತ್ತು. ಕೂಡಲೇ ತಾನು ತೆಗೆದುಕೊಂಡು ಹೋಗಿದ್ದ ಉಪಕರಣದಿಂದ ಒಂದಷ್ಟು ಮಣ್ಣನ್ನು ಎತ್ತಿ ಆ ಬಿರುಕನ್ನು ಮುಚ್ಚಲು ಪ್ರಯತ್ನಿಸಿದನು. ಆದರೆ ಹೆಚ್ಚುತ್ತಿದ್ದ ಮಳೆಯ ರಭಸದಿಂದ, ಹರಿದು ಬರುತ್ತಿದ್ದ ನೀರಿನ ಪ್ರಮಾಣವೂ ಹೆಚ್ಚುತ್ತಲೇ ಇತ್ತು. ಏನು ಮಾಡಿದರೂ ನೀರಿನ ಹರಿವನ್ನು ನಿಲ್ಲಿಸಲಾಗಲಿಲ್ಲ. ಗುರುವಿನ ಆಜ್ಞೆಯನ್ನು ಪಾಲಿಸಲೇಬೇಕೆಂಬ ನಿಷ್ಠೆಯಿಂದ ಉದ್ದಾಲಕನು ಆ ಬಿರುಕಿಗೆ ಅಡ್ಡಲಾಗಿ ತಾನೇ ಮಲಗಿದನು. ನೀರು ಹರಿದುಬರುವುದೇನೋ ನಿಂತರೂ, ಮಳೆ, ಛಳಿಯಲ್ಲಿ ಮಲಗಿದ್ದ ಉದ್ದಾಲಕನ ಶರೀರವು ಶೀತಬಾಧೆಯಿಂದ ನಡುಗುತ್ತಿತ್ತು. ಆದರೂ ಆತ ಕರ್ತವ್ಯ ವಿಮುಖನಾಗಲಿಲ್ಲ.

ಇತ್ತ ಗುರುಗಳು ಎಷ್ಟು ಹೊತ್ತಾದರೂ ಶಿಷ್ಯನು ಹಿಂತಿರುಗಲಿಲ್ಲವೆಂದು ಚಿಂತೆಗೀಡಾದರು. ಸುರಿಯುತ್ತಲೇ ಇದ್ದ ಮಳೆಯಲ್ಲಿ ಶಿಷ್ಯನು ಹೇಗಿರಬಹುದೆಂಬ ಕಾಳಜಿ. ಕತ್ತಲೆಯ ಸಮಯದಲ್ಲಿ ಏನಾದರೂ ತೊಂದರೆಯಾಗಿರಬಹುದೆಂಬ ಆತಂಕ, ಎಲ್ಲದರಿಂದ ಕಳವಳಗೊಂಡು ಉಳಿದ ಶಿಷ್ಯರೊಂದಿಗೆ ಕೈದೀಪವನ್ನೂ, ಕೊಡೆಯನ್ನೂ ಹಿಡಿದು ಊರಾಚೆ ಇದ್ದ ಹೊಲಕ್ಕೆ ಹೋಗಿ ಶಿಷ್ಯನನ್ನು ಜೋರಾಗಿ ಕರೆಯತೊಡಗಿದರು. ಭೋರ್ಗರೆದು ಸುರಿಯುತ್ತಿರುವ ಮಳೆ, ಸುತ್ತಲೂ ಕವಿದಿದ್ದ ಗಾಢಾಂಧಕಾರ, ಆಗಾಗ ಆರ್ಭಟಿಸುತ್ತಿದ್ದ ಸಿಡಿಲು, ಮಿಂಚು. ಗುರುಗಳ ಮನಸ್ಸು ಶಿಷ್ಯನನ್ನು ಕುರಿತು ತಲ್ಲಣಗೊಂಡಿತ್ತು. ನಾಲ್ಕಾರು ಬಾರಿ ಕೂಗಿದ ನಂತರ 'ಇಲ್ಲಿದ್ದೇನೆ ಗುರುಗಳೇ' ಎಂಬ ಉತ್ತರ ಬಂದ ದಿಕ್ಕಿನತ್ತ ನಿಧಾನವಾಗಿ ಸಾಗಿದ ಗುರು- ಶಿಷ್ಯರ ತಂಡ ಅಲ್ಲಿ ಕಂಡ ದೃಶ್ಯದಿಂದ ಮೂಕವಾಗಿತ್ತು. ಉದ್ದಾಲಕ ಮಳೆಯಿಂದ ತೊಯ್ದು ತೊಪ್ಪೆಯಾಗಿದ್ದರೂ ಬಿರುಕು ಬಿಟ್ಟಿದ್ದ ಕಟ್ಟೆಯ ರಕ್ಷಣೆಗಾಗಿ ಮಲಗಿದಲ್ಲಿಂದ ಮೇಲೆದ್ದಿರಲಿಲ್ಲ. ಶಿಷ್ಯನ ಕರ್ತವ್ಯ ನಿಷ್ಠೆಯನ್ನು ಕಂಡು ಗುರುಗಳ ಅಂತಃಕರಣ ಕಲಕಿಹೋಗಿತ್ತು. ಜೊತೆಗಿದ್ದ ಶಿಷ್ಯರೂ ಸಹ ತಮ್ಮ ಸಹಪಾಠಿಯ ಶ್ರದ್ಧೆಯನ್ನು ಕಂಡು ಬೆರಗಾಗಿದ್ದರು. ತಾವು ಅಸಮಾಧಾನಗೊಂಡಿದ್ದನ್ನು ನೆನೆದು ನಾಚಿದ್ದರು.

ಪುಟ 9 ಕ್ಕೆ ➤

# ಸಾಮಾಜಿಕ ಕಳಕಳಿಯ ಮೊದಲ ಶಿಕ್ಷಕಿ



ಆ ಹುಡುಗಿ ಆಂಗ್ಲಪುಸ್ತಕವೊಂದರ ಹಾಳೆಗಳನ್ನು ತಿರುವಿ ಹಾಕುತ್ತಿದ್ದಳು. ಅದನ್ನು ಕಂಡು ಓಡಿ ಬಂದ ತಂದೆಯು ಅದನ್ನು ಕಿತ್ತುಕೊಂಡು ಮನೆಯಿಂದಾಚೆ ಎಸೆದರು. ಹೇಳಿದರು, ಶಿಕ್ಷಣದ ಅಧಿಕಾರವು ಕೇವಲ ಉಚ್ಚಜಾತಿಯ ಪರುಷರಿಗಷ್ಟೇ ಇದೆ. ದಲಿತ ಮತ್ತು ಮಹಿಳೆಯರು ಶಿಕ್ಷಣ ಪಡೆಯುವುದು ಪಾಪವಾಗಿದೆ.

ನಿರಕ್ಷರಿಯಾಗಿದ್ದ ಸಾವಿತ್ರೀಬಾಯಿ ಆಗಲೇ ಪಣತೊಟ್ಟಳು ಏನೇ ಆಗಲಿ ನಾನು ಉಚ್ಚಶಿಕ್ಷಣ ಪಡೆದೇ ಪಡೆಯುವೆ, ತಾನು ಶಿಕ್ಷಣ ಪಡೆಯುವುದಷ್ಟೇ ಅಲ್ಲ, ಎಲ್ಲಾ ಮಹಿಳೆಯರೂ ಶಿಕ್ಷಿತರಾಗಬೇಕೆಂಬ ಕನಸು ಕಂಡು, ಅದನ್ನು ಸಾಕಾರಗೊಳಿಸಿದಳು.

19 ನೇ ಶತಮಾನದ ಅಂತ್ಯಕಾಲ, ಆಗ ಶಿಕ್ಷಣವಿಲ್ಲದ ಕತ್ತಲ ಬದುಕು ಮಹಿಳೆಯರಿಗೆ. ಒಂಭತ್ತನೆ ವಯಸ್ಸಿಗೇ ಪುಣೆಯ ಜ್ಯೋತಿಬಾಫುಲೆಯೊಂದಿಗೆ ಅವಳ ವಿವಾಹ. ಜ್ಯೋತಿಬಾ ಅವರು ತಮ್ಮ ಹೊಲದ ಒಂದು ಮಾವಿನ ಮರದ ಕೆಳಗೆ ಸಾವಿತ್ರಿಗೆ ಶಿಕ್ಷಣದ ಪಾಠ ಹೇಳತೊಡಗಿದರು. ಮಾವಿನ ಟೊಂಗೆಯೇ ಅಲ್ಲಿ ಲೇಖನಿ. ಜಾನಪದ ಪ್ರಸಂಗಗಳನ್ನು ಹೇಳಿ ಭಾಷೆ, ಗಣಿತ ಮತ್ತು ಸಾಮಾನ್ಯ ಜ್ಞಾನದ ಪಾಠ ಹೇಳತೊಡಗಿದರು. ಮುಂದೆ 1 ಜನವರಿ 1848 ರಂದು ಪುಣೆಯ ತಾತ್ಯಾಸಾಹೆಬ್ ಭಿಡೆಯವರು ಒಂದು ಕಟ್ಟಡದಲ್ಲಿ ಹೆಣ್ಣುಮಕ್ಕಳಿಗೆ ಮೊಟ್ಟಮೊದಲ ಶಾಲೆಯನ್ನು ಅವರು ಆರಂಭಿಸಿದರು. ಅವರ ಸ್ನೇಹಿತರ ಒಂಭತ್ತು ಹುಡುಗಿಯರಿಗೆ ಅಲ್ಲಿ ಪ್ರವೇಶ ನೀಡಲಾಯಿತು. 15 ಮೇ 1848 ರಂದು ಪುಣೆಯ ಹರಿಜನ ಬಸ್ತಿಯಲ್ಲಿ ಎರಡನೇ ವಿದ್ಯಾಲಯ ಆರಂಭವಾಯಿತು. ಅದರ ವ್ಯವಸ್ಥೆ ನೋಡಿಕೊಳ್ಳುತ್ತಿದ್ದವರು ಜ್ಯೋತಿಬಾ ಫುಲೆ.

ಸಾವಿತ್ರೀಬಾಯಿ ಫುಲೆ 3 ಜನವರಿ 1831 ರಂದು ಮಹಾರಾಷ್ಟ್ರದ ಸಾತರಾ ಜಿಲ್ಲೆಯ ನಾಯಗಾಂವ್ ನಲ್ಲಿ ಜನಿಸಿದರು. ತಂದೆ ಖಂಡೋಜೀ ನೆವಸೆ ಪಾಟೀಲ, ತಾಯಿ ಲಕ್ಷ್ಮೀಬಾಯಿ. ಈ ದಂಪತಿಗಳ ಮೊದಲ ಸಂತಾನವೇ ಸಾವತ್ರೀಬಾಯಿ. ಅವಳಿಗೆ ಮೂವರು ತಮ್ಮಂದಿರು–ಸಿದೂಜೀ, ಸಖಾರಾಮ ಮತ್ತು ಶ್ರೀಪತಿ. ಬಾಲ್ಯದಿಂದಲೇ ಸಮಾಜಸೇವೆಯ ಗುಣ ಹೊಂದಿದ್ದ ಸಾವಿತ್ರೀಬಾಯಿಗೆ ಸಾಮಾಜಿಕ ಕಳಕಳಿಯಿತ್ತು. ಸಮಾಜದಲ್ಲಿ ವ್ಯಾಪಿಸಿದ್ದ ಅನೇಕ ಮೂಢನಂಬಿಕೆಗಳು ಮತ್ತು ಕಂದಾಚಾರಗಳಿಂದ ಆಕೆ ಮನನೊಂದಳು. ಆಗ ಸ್ತ್ರೀಯರಿಗೆ ಶಿಕ್ಷಣ ಇತ್ಯಾದಿ ಅಧಿಕಾರಗಳಿರಲಿಲ್ಲ. ಎಲ್ಲೆಡೆ ಅನಕ್ಷರತೆಯೇ ಕಾಣುತ್ತಿತ್ತು. ಸ್ಪೃಶ್ಯಾಸ್ಪೃಶ್ಯತೆ, ಸತಿಪದ್ಧತಿ, ಬಾಲ್ಯವಿವಾಹ, ವಿಧವೆಯರ ದುರವಸ್ಥೆ ಇವನ್ನೆಲ್ಲಾ ನಿವಾರಿಸುವ ದೃಢಸಂಕಲ್ಪ ತೊಟ್ಟು ಸಾವಿತ್ರೀಬಾಯಿ ದೀರ್ಘ ಸಂಘರ್ಷಕ್ಕೆ ಅಣಿಯಾದಳು. ಸೇವೆ, ಸಮಾಜೋತ್ಥಾನದ ಮನೋಭಾವದಿಂದ ಅವಳು ಪಾಠ ಕಲಿತು, ಅಧ್ಯಾಪಕಿಯಾದಳು. ಮೊದಲ ಶಿಕ್ಷಕಿಯೆನಿದಳು.

ಸುಧಾರಣೆಗೆ ಹೆಜ್ಜೆಯಿಡುತ್ತಿದ್ದ ಸಾವಿತ್ರೀ ಬಾಯಿಯ ಕಾರ್ಯಗಳಿಂದ ಸಮಾಜದ ಹಟವಾದಿಗಳು ಕೆರಳಿ ಅವಳನ್ನು ವಿರೋಧಿಸತೊಡಗಿದರು. ಆಕೆಯ ಬಗ್ಗೆ ವ್ಯಂಗ್ಯ, ಚುಚ್ಚು ಮಾತುಗಳನ್ನು ಆಡುತ್ತಾ, ಅವಳ ಕಡೆ ಕಲ್ಲು ಸಗಣಿ ಎಸೆದರು. ಆದರೂ ಆಕೆ ಧೃತಿಗೆಡದೆ ತನ್ನ ಕಾರ್ಯದಲ್ಲಿ ಮುಂದುವರೆದಳು. ಪುಣೆಯ ಸಮೀಪ 18 ವಿದ್ಯಾಲಯಗಳನ್ನು ಫುಲೆ ದಂಪತಿಗಳು ನಡೆಸತೊಡಗಿದರು. ಇದರಿಂದ ಕೆರಳಿದ ವಿರೋಧಿಗಳು ಜ್ಯೋತಿಬಾ ಅವರ ತಂದೆಯ ಕಿವಿಯೂದತೊಡಗಿದರು. ಇದರ ಪರಿಣಾಮವಾಗಿ ಅವರು ಜ್ಯೋತಿಬಾ ಮತ್ತು ಸಾವಿತ್ರೀಬಾಯಿ ಯನ್ನು ಮನೆಯಿಂದ ಹೊರ ಹಾಕಿದರು. ಇದನ್ನು ಸವಾಲೆಂದು ಸ್ವೀಕರಿಸಿ ಅವರು ಕಾರ್ಯವನ್ನು ಮತ್ತಷ್ಟು ವಿಸ್ತರಿಸಿದರು.

ಉಪೇಕ್ಷಿತವರ್ಗದ ಬಂಧುಗಳ ಬಗ್ಗೆ ಸಹಾನುಭೂತಿ ಹೊಂದಿದ್ದ ಸಾವಿತ್ರೀಬಾಯಿಯು ಅವರ ವಸತಿಕ್ಷೇತ್ರಗಳಿಗೆ ಭೇಟಿಯಿತ್ತು, ಅವರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವಂತೆ ತನ್ನ ಭಾಷಣಗಳಿಂದ ಪ್ರೇರೇಪಿಸಿದರು. ತಮ್ಮ ಮನೆಯ ನೀರಿನ ತೊಟ್ಟಿ– ಕೊಳಗಳನ್ನು ಅವರ ಬಳಕೆಗೆ ತೆರೆದಿಟ್ಟರು. ವಿಧವೆ ಕಾಶೀಬಾಯಿಯು ಆತ್ಮಹತ್ಯೆ ಮಾಡಿಕೊಳ್ಳದಂತೆ ತಡೆದಿದ್ದಲ್ಲದೇ ಅವಳಿಗೆ ತನ್ನ ಮನೆಯಲ್ಲಿ ಆಶ್ರಯವಿತ್ತರು. ಅವಳ ಹೆರಿಗೆಯ ವ್ಯವಸ್ಥೆಮಾಡಿ ಅವಳ ಮಗ ಯಶವಂತನನ್ನು ದತ್ತು ತೆಗೆದಕೊಂಡು ಪೋಷಿಸತೊಡಗಿದರು. ಹೀಗೆ ಸಾವಿತ್ರೀಬಾಯಿಯ ನಡೆ–ನುಡಿಗಳಲ್ಲೇನೂ ಅಂತರವಿರಲಿಲ್ಲ. ಅಷ್ಟೇ ಅಲ್ಲ, ಅವರು ಈ ಕೃತ್ಯದಿಂದ ಸಮಾಜಕ್ಕೆ ಒಂದು ಮೇಲ್ಪಂಕ್ತಿ ಹಾಕಿಕೊಟ್ಟರು.

1873 ರಲ್ಲಿ ಫುಲೆ ದಂಪತಿಗಳು ಸತ್ಯಶೋಧನ ಸಮಾಜವನ್ನು ಸ್ಥಾಪಿಸಿ, ಅದರ ಮೂಲಕ ವಿಧವಾ ವಿವಾಹದ ಪರಂಪರೆಯನ್ನು ಆರಂಭಿಸಿದರು. ಈ ಸಂಸ್ಥೆಯಿಂದ ಮೊದಲ ವಿಧವಾ ಪುನರ್ವಿವಾಹವನ್ನು 5 ಡಿಸೆಂಬರ್ 1873 ರಂದು ಮಾಡಲಾಯಿತು. ಅವರು ವಿಧವೆಯರ ಕೇಶಮುಂಡನ ಮಾಡದಂತೆ ಕ್ಷೌರಿಕರ ಮನೊವೊಲಿಸಿದರು. ಹೀಗೆ ವಿಧವೆಯರ ಬಾಳಿಗೊಂದು ಬೆಳಕಾದಳು. ಈ ಸಂಸ್ಥೆಯು ನಡೆಸುತ್ತಿದ್ದ ವಿದ್ಯಾರ್ಥಿನಿಲಯದಲ್ಲಿ ಸಹಸ್ರಾರು ಮಕ್ಕಳಿಗೆ ಆಶ್ರಯ ನೀಡಲಾಯಿತು. ಹೀಗೆ ನವಪೀಳಿಗೆಯ ಏಳಿಗೆಯ ಕನಸನ್ನು ಅವರು ನನಸಾಗಿಸಿದರು.

1897 ರಲ್ಲಿ ಪುಣೆಯಲ್ಲಿ ಪ್ಲೇಗ್ ಹಾವಳಿಯುಂಟಾದಾಗ ಸಾವಿತ್ರೀಬಾಯಿ ಹಗಲಿರುಳೂ ಅವರ ಸೇವಾಕಾರ್ಯದಲ್ಲಿ ತೊಡಗಿದ್ದಳು. ಹಾಗೆಯೇ ಸೋಂಕು ತಗಲಿ 10 ಮಾರ್ಚ್ 1897 ರಂದು ನಿಧನ ಹೊಂದಿದಳು. ಭಾರತದ ಶೈಕ್ಷಣಿಕ ಮತ್ತು ಸಾಮಾಜಿಕ ಉತ್ಥಾನದಲ್ಲಿ ಫುಲೆ ದಂಪತಿಗಳ ಕಾರ್ಯ ಅನುಸರಣೀಯವಾಗಿದೆ. ಮೊದಲ ಶಿಕ್ಷಕಿ ಸಾವಿತ್ರೀಬಾಯಿಯ ಜನ್ಮದಿನವನ್ನು ಕರ್ನಾಟಕದ ಶಾಲೆಗಳಲ್ಲಿ ಸರ್ಕಾರದ ವತಿಯಿಂದ ಈ ಬಾರಿ ಆಚರಿಸಿದ್ದು ಅಭಿನಂದನಾರ್ಹವಾಗಿದೆ. •

# ಸಂಘದ ವಾರ್ತೆ

## ಕೆ.ಆರ್. ಪೇಟೆಯಲ್ಲಿ ಸಂಕಲ್ಪ ದಿನಾಚರಣೆ

ವಿದ್ಯಾರ್ಥಿಗಳು ಕೇವಲ ಅಂಕ ಪಡೆಯಲು ವಿದ್ಯಾಭ್ಯಾಸ ಮಾಡದೆ ವಿದ್ಯೆಯ ಜೊತೆಯಲ್ಲಿ ದೇಶಭಕ್ತಿ ಮತು ದೇಶಕ್ಕೆ ಏನಾದರೂ ಕೊಡುಗೆ ನೀಡಬೇಕೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ತಿಳಿಸಿದರು.

ಪಟ್ಟಣದ ಪ್ರಗತಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಪ್ರಗತಿ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ ಸ್ವಾಮಿ ವಿವೇಕಾನಂದರ ಜಯಂತಿ, ರಾಷ್ಟ್ರೀಯ ಯುವ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಮ್ಮ ಪೋಷಕರು ಆಚಾರ ವಿಚಾರಗಳನ್ನು ಬದಿಗಿಟ್ಟು ಮಕ್ಕಳು ಶೇ. 100 ಅಂಕಗಳನ್ನು ಪಡೆಯಬೇಕು ಎಂದು ಮಕ್ಕಳ ಮೇಲೆ ಒತ್ತಡ ಹಾಕುವುದು, ಮಕ್ಕಳ ಹಾಗೂ ದೇಶದ ಅಭಿವೃದ್ಧಿಗೆ ಮಾರಕವಾದುದಾಗಿದೆ. ನಾನು ನಮ್ಮದು ನನ್ನ ಧರ್ಮ, ನನ್ನ ಆಚಾರ ವಿಚಾರ ಎಂಬ ಸಂಕುಚಿತ ಭಾವನೆ ಬಿಟ್ಟು ನಾವು ನಮ್ಮದು ನಮ್ಮ ದೇಶ ಎಂದು ವಿಶಾಲ ಮನೋಭಾವ ಬೆಳೆಸಿಕೊಳ್ಳಬೇಕು. ದೇಶ ಭಕ್ತಿ ಜೊತೆಗೆ ವಿದ್ಯಾರ್ಥಿಗಳು ಓದಿನ ಜೊತೆಯಲ್ಲಿ ಸ್ವಾಮಿ ವಿವೇಕಾನಂದರಂತಹ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಉಪನ್ಯಾಸಕ ಮಂಜುನಾಥ್ ಮಾತನಾಡಿ ಅಮೇರಿಕಾದ ಚಿಕೋಗೋದಲ್ಲಿ ನಡೆದ ವಿಶ್ವ ಸರ್ವಧರ್ಮಗಳ ಸಮ್ಮೇಳನದಲ್ಲಿ ಹಾಜರಿರುವ ಎಲ್ಲಾ ತನ್ನ, ಸಹೋದರ, ಸಹೋದರಿಯರೇ ಎಂಬ ನಾಲ್ಕು ಪದ ಉಚ್ಚರಿಸುವ ಮೂಲಕ ಒಂದೇ ಕ್ಷಣದಲ್ಲಿ ವಿಶ್ವಕ್ಕೆ ಭಾರತ ಸಂಸ್ಕೃತಿಯನ್ನು ಪಸರಿಸಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ ಎಂದು ಹೇಳಿದರು.

ನಿವೃತ್ತ ಪ್ರಾಂಶುಪಾಲರು ಹಾಗೂ ಕರ್ನಾಟಕ ಮಾಧ್ಯಮಿಕ ಶಿಕ್ಷಕ ಸಂಘದ ಜಿಲ್ಲಾ ಅಧ್ಯಕ್ಷ ಕೆ ಕಾಳೇಗೌಡರು ಮಾತನಾಡಿ ವಿದ್ಯಾರ್ಥಿಗಳು ಹಾಗೂ ಯುವಜನರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕಾದ ಜವಾಬ್ದಾರಿ ಪೋಷಕರ ಹಾಗೂ ಶಿಕ್ಷಕರ ಮೇಲಿದೆ. ಅವರಿಗೆ ಉತ್ತಮ ಮಾರ್ಗದರ್ಶನ ನೀಡಬೇಕು ಎಂದರು.

ಜಿಲ್ಲಾ ಗ್ರಂಥಾಲಯದ ಪ್ರಾಧಿಕಾರದ ಸದಸ್ಯ ಕೆ ಆರ್ ನೀಲಕಂಠ ಉದ್ಯಮಿ ಕೆ ಎಸ್ ರಾಜೇಶ್, ಶಿಕ್ಷಕ ಸಂಘದ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ್, ಪ್ರಗತಿ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಮೋನಿಕಾ, ಮುಖ್ಯ ಶಿಕ್ಷಕ ಗೋಪಾಲಕೃಷ್ಣ ಉಪಸ್ಥಿತರಿದ್ದರು.

## ಸಂಕಲ್ಪ ದಿನಾಚರಣೆ – ಬೆಂಗಳೂರು ಉತ್ತರ ಜಿಲ್ಲೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಘಟಕಗಳು ಜಂಟಿಯಾಗಿ ಸಂಕಲ್ಪ ದಿನಾಚರಣೆ ಮತ್ತು ಫೋನ್ ಇನ್ ಕಾರ್ಯಕ್ರಮವನ್ನು ದಿನಾಂಕ 18–01–2020 ರ ಶನಿವಾರದಂದು ಸಂಘದ ಕಾರ್ಯಾಲಯ ದಲ್ಲಿ ಆಯೋಜಿಸಿತ್ತು.

ಸಂಘದ ಹಿರಿಯರಾದ ಶ್ರೀ ಹೆಚ್ ನಾಗಭೂಷಣ್ ರಾವ್‌ರವರು ಶಿಕ್ಷಕರಿಗೆ ಸಂಕಲ್ಪಬೋಧನೆ ಮಾಡಿ ಸಂಕಲ್ಪ ದಿನಾಚರಣೆಯ ಮಹತ್ತ್ವ ಮತ್ತು ಸನಾತನ ಧರ್ಮದ ಬಗ್ಗೆ ತಿಳಿಸಿದರು. ಬೆಂಗಳೂರು ಉತ್ತರ ಜಿಲ್ಲೆಯ ಉಪನಿರ್ದೇಶಕರು ಹಾಗೂ  ಮುಖ್ಯ ಅತಿಥಿಗಳೂ ಆದ ಶ್ರೀ ಜಯರಂಗರವರು ಶಿಕ್ಷಕ ಸಂಘದ ಕಾರ್ಯಚಟುವಟಿಕೆಗಳನ್ನು ಪ್ರಶಂಸಿಸಿದರು ಮತ್ತು ಉತ್ತರ ಹಾಗೂ ದಕ್ಷಿಣ ಬೆಂಗಳೂರು ಜಿಲ್ಲೆಗಳು ಎಸ್.ಎಸ್ ಎಲ್ ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಲಿ ಎಂದು ಹಾರೈಸಿ ಎಸ್ ಎಸ್ ಎಲ್ ಸಿ ಮಕ್ಕಳಿಗಾಗಿ ಫೋನ್ ಇನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿ ಉತ್ತರ ವಲಯ –3 ರ ಶ್ರೀ ಕೃಷ್ಣರವರು ಮಾತನಾಡಿ ವಿದ್ಯಾರ್ಥಿಗಳ ಇಂದಿನ ಮನೋಭಾವ ಹೇಗಿದೆ? ಅದಕ್ಕೆ ನಾವು ಹೇಗೆ ಸ್ಪಂಧಿಸಬೇಕು ಹೇಗೆ ಫಲಿತಾಂಶವನ್ನು ಹೆಚ್ಚಿಸಬೇಕು ಎಂಬುದರ ಬಗ್ಗೆ ಶಿಕ್ಷಕರಿಗೆ ತಿಳಿಸಿದರು.

ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿ ಉತ್ತರ ವಲಯ–2ರ ಶ್ರೀಮತಿ ಉಮಾದೇವಿಯವರು ಈ ಸಂಘವು ಎಲೆಯ ಮರೆಯ ಕಾಯಿಯಂತೆ ಶಿಕ್ಷಕರಿಗಾಗಿ, ವಿದ್ಯಾರ್ಥಿಗಳಿಗಾಗಿ ಹಾಗೂ ಸಮಾಜಕ್ಕಾಗಿ ಸತತವಾಗಿ ಕೆಲಸ ಮಾಡುತ್ತಿರುವ ಏಕೈಕ ಸಂಘವಾಗಿದೆ ಎಂದು ಹೆಮ್ಮೆಯಿಂದ ಹೇಳಿದರು. ಅಲ್ಲದೇ ತಮ್ಮ ವಲಯದ ಸುಮಾರು 6000ಕ್ಕೂ ಅಧಿಕ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ದೂರವಾಣಿ ಸಂಖ್ಯೆಯನ್ನು ಪಡೆದು ಪ್ರತಿ ವಿದ್ಯಾರ್ಥಿಗಳನ್ನು ಸಂಪರ್ಕಿಸುತ್ತಿದ್ದೇನೆಂದು ತಿಳಿಸಿದರು.

ಮುಖ್ಯ ಅತಿಥಿಗಳು ಎಲ್ಲಾ ಸಂಪನ್ಮೂಲ ಶಿಕ್ಷಕರನ್ನು ಸನ್ಮಾನಿಸಿದರು. ಶ್ರೀ ಎಸ್.ಜಿ ತಾಂಬೆಯವರು ಫೋನ್ ಇನ್ ಕಾರ್ಯಕ್ರಮದ ಮಹತ್ತ್ವವನ್ನು ತಿಳಿಸಿದರು. ಶ್ರೀಮತಿ ಸೀತಾ ಭಟ್‌ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ಶ್ರೀ ಜೆ.ಎಂ ಜೋಶಿಯವರು ಪ್ರಾಸ್ತಾವಿಕ ಭಾಷಣ ಮಾಡಿದರು. ಶ್ರೀ ಗಂಗಪ್ಪ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು. ಶ್ರೀ ವೆಂಕಟರಮಣ ದೇವರ ಭಟ್ಟರು ವಂದನಾರ್ಪಣೆ ಮಾಡಿದರು. ಶ್ರೀ ಎಂ ವಿ ಗಂಗಾಧರ ಕಾರ್ಯಕ್ರಮವನ್ನು ನಿರೂಪಿಸಿದರು. ಸುಮಾರು 40 ಶಿಕ್ಷಕ/ ಶಿಕ್ಷಕಿಯರು ಹಾಜರಾಗಿದ್ದರು.

ಪುಟ 8 ಕ್ಕೆ ➢

➢ ಪುಟ 7 ರಿಂದ..... ವರದಿಗಳು...

# ಗುಲ್ಬರ್ಗ ಜಿಲ್ಲೆ

ಎಸ್ ಎಸ್ ಎಲ್ ಸಿ ಫಲಿತಾಂಶ ಹೆಚ್ಚಳಕ್ಕೆ ಪೂರಕ ಪ್ರಯತ್ನವಾಗಿ ಕಲಬುರಗಿ ನಗರದ ಆಳಂದ ರಸ್ತೆಯಲ್ಲಿರುವ ಶಾಲೆಯಲ್ಲಿ ಜನವರಿ 1, 2020ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀ ಶಾಂತಗೌಡ ಪಾಟೀಲ ಚಾಲನೆ ನೀಡಿದರು.

ಚಾಲನೆ ನೀಡಿ ಮಾತನಾಡಿದ ಅವರು ವಿದ್ಯಾರ್ಥಿಗಳನ್ನು ಉತ್ತಮ ಫಲಿತಾಂಶದತ್ತ ಕರೆದೊಯ್ಯುವ ನಿಟ್ಟಿನಲ್ಲಿ ಮಾಧ್ಯಮಿಕ ಶಿಕ್ಷಕ ಸಂಘ ಕಲಬುರಗಿ ಘಟಕ ಕೈಗೊಂಡಿರುವ ಕಾರ್ಯವನ್ನು ಶ್ಲಾಘನೀಯ ಎಂದರು.

ಉಪನಿರ್ದೇಶಕರ ಜೊತೆಗೆ ಸಮಗ್ರ ಶಿಕ್ಷಣ ಕರ್ನಾಟಕ ಕಲಬುರಗಿ ಯೋಜನಾ ಉಪಸಮನ್ವಯಾಧಿಕಾರಿ ಶ್ರೀ ಸಿ ಬಿ ಪಾಟೀಲ ಶಿಕ್ಷಣಾಧಿಕಾರಿ ಭರತರಾಜ ಸಾವಳಗಿ, ಎಸ್ ಎಸ್ ಎಲ್ ಸಿ ನೋಡಲ್ ಅಧಿಕಾರಿ ರಮೇಶ್ ಜಾನಕರ ಜೊತೆಗಿದ್ದರು.

ಮುಖ್ಯ ಅತಿಥಿಗಳಾಗಿ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಚಿದಾನಂದ ಪಾಟೀಲ ಮಾತನಾಡಿ ವಿದ್ಯಾರ್ಥಿಗಳ ಪ್ರಶ್ನೆಗಳನ್ನೂ ಸಂಪನ್ಮೂಲ ವ್ಯಕ್ತಿಗಳು ತಾಳ್ಮೆಯಿಂದ ಆಲಿಸಿ ಉತ್ತರಿಸುವ ಯತ್ನ ಮಾಡಬೇಕು ಎಂಬುದನ್ನು ಶಿಕ್ಷಕ ಸಹೋದರರಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗುವಿವಿ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥ ಡಾ ಕೆ ಎನ್ ಮಾಲಿ ಪಾಟೀಲ, ಕೆ ಬಸವಾರಾಜು, ಎಚ್.ಬಿ ಪಾಟೀಲ, ಚಂದ್ರಕಾಂತ ಬಿರಾದರ, ಸಂಘದ ಪ್ರಧಾನ ಕಾರ್ಯದರ್ಶಿ ಸಂಜೀವ ಕುಮಾರ ಪಾಟೀಲ, ಮಹೇಶ ದೇವಣಿ, ವಿವಿಧ ಶಾಲಾ ಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಇಲ್ಲಿಯವರೆಗೂ ಸುಮಾರು 500 ರಿಂದ 600 ವಿದ್ಯಾರ್ಥಿಗಳ ಕರೆಗಳಿಗೆ ಉತ್ತರಿಸಲಾಗಿದೆ. ಬೇರೆ ಜಿಲ್ಲೆಗಳಾದ ಮಂಡ್ಯ, ವಿಜಯಪುರ, ಬೀದರ, ಯಾದಗಿರಿ, ಗದಗ ರಾಯಚೂರು ಜಿಲ್ಲೆಗಳಿಂದಲೂ ಕರೆಬಂದಿರುವುದು ವಿಶೇಷ. ●

➢ ಪುಟ 5 ರಿಂದ..... ಗುರು–ಶಿಷ್ಯ...

ಶಿಷ್ಯನನ್ನು ಪ್ರೀತಿಯಿಂದ ಮೇಲೆಬ್ಬಿಸಿದ ಗುರುಗಳು ನಂತರ ಎಲ್ಲ ಶಿಷ್ಯರೊಂದಿಗೆ ಸೇರಿ ಒಡೆದ ಬಿರುಕನ್ನು ಸರಿಪಡಿಸಿದ್ದರು. ವಿದ್ಯೆಕಲಿಸುವ, ಬದುಕನ್ನೇ ರೂಪಿಸುವ ಗುರುವಿನಲ್ಲಿ ಭಕ್ತಿ, ನಿಷ್ಠೆ, ನಂಬಿಕೆ ಎಷ್ಟು ಮುಖ್ಯವೋ ಅಷ್ಟೇ ತನ್ನನ್ನು ನಂಬಿ, ತನ್ನ ಮಡಿಲಿಗೆ ಬಂದ ಶಿಷ್ಯನ ಹಿತರಕ್ಷಣೆಯ ಸಂಪೂರ್ಣ ಜವಾಬ್ದಾರಿ ಗುರುವಿನದ್ದಾಗಿರುತ್ತದೆಂಬುದೂ ಅಷ್ಟೇ ಮಹತ್ತ್ವದ ಮೌಲ್ಯವಾಗಿರುತ್ತದೆ. ಶಿಕ್ಷಣ ಕೇಂದ್ರಗಳೆನಿಸಿ ಕೊಂಡಿದ್ದ ಗುರುಕುಲಗಳು ವ್ಯಾವಹಾರಿಕ ದೃಷ್ಟಿಯಿಂದ ಸಂಪೂರ್ಣವಾಗಿ ದೂರವಿದ್ದು ಸುಸಂಸ್ಕೃತ ಸಮಾಜ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಿಂದಲೇ ಇಂದು ಮತ್ತೆ ಗುರುಕುಲಶಿಕ್ಷಣ ಎಂಬ ಪರಿಕಲ್ಪನೆ ಮೌಲ್ಯಧಾರಿತ ಶಿಕ್ಷಣವನ್ನು ನೀಡುವಲ್ಲಿ ದೇಶದಾದ್ಯಂತ ಹಲವಾರು ಕಡೆಗಳಲ್ಲಿ ಕಾರ್ಯತತ್ಪರವಾಗಿದ್ದು ಮೌಲ್ಯೋಪಾಸನೆಯಲ್ಲಿ ಸಹಕರಿಸುತ್ತಿವೆ. ●

# ಶಿಕ್ಷಕ ಸಂಘದಿಂದ ವಿನೂತನ ಪ್ರಯೋಗ

ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಇನ್ನೇನು ಎರಡು ತಿಂಗಳು ಉಳಿದಿದೆ. ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸುವ ಭಯ, ಪೋಷಕರಿಗೆ ಮಕ್ಕಳ ಫಲಿತಾಂಶದ ಆತಂಕ, ಇನ್ನು ಮುಖ್ಯೋಪಾಧ್ಯಾಯರಿಗೆ ತಮ್ಮ ಶಾಲೆಯ ಶೇಕಡಾ ಫಲಿತಾಂಶದ ಬಗೆಗಿನ ಚಿಂತೆ. ಅದಕ್ಕಾಗಿ ನಾನಾ ತರಹದ ಪ್ರಯತ್ನ.

ಈ ಎಲ್ಲರ ಭಯ, ಚಿಂತೆ, ಆತಂಕಗಳ ಪರಿಹಾರದ ಬಗ್ಗೆ ಯೋಚಿಸಿದ್ದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ. ಈ ನೂತನ ಪ್ರಯೋಗ ಕಳೆದ ವರ್ಷ ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಆಯ್ದ ಸಂಪನ್ಮೂಲ ಶಿಕ್ಷಕರನ್ನು ಗುರುತಿಸಿ, ಅವರ ಬಳಿ ವೈಯಕ್ತಿಕವಾಗಿ ಮಾತನಾಡಿ ಒಪ್ಪಿಸಿ, ಜಿಲ್ಲೆಯ ಎಲ್ಲ ಶಾಲೆಗಳನ್ನು ಸಂಪರ್ಕಿಸಿ ವಿಚಾರ ತಿಳಿಸಿ 1 ವಾರಕಾಲ ವಿವಿಧ ವಿಷಯಗಳ ಬಗ್ಗೆ **"ಫೋನ್ ಇನ್"** ಕಾರ್ಯಕ್ರಮವನ್ನು ಅಲ್ಲಿನ ನಮ್ಮ ಕಾರ್ಯಕರ್ತರು ಯೋಜಿಸಿದರು.

ನೂರಾರು ವಿದ್ಯಾರ್ಥಿಗಳು ಮೊಬೈಲ್ ಮೂಲಕ ತಮ್ಮ ಅನುಮಾನಗಳನ್ನು ಸಂಪನ್ಮೂಲ ಶಿಕ್ಷಕರೊಂದಿಗೆ ಸಂಕೋಚವಿಲ್ಲದೆ ಕೇಳಿ ಉತ್ತರ ಪಡೆದು ಪರಿಹರಿಸಿಕೊಂಡರು. ಕಾರ್ಯಕ್ರಮ ಯಶಸ್ವಿಯಾಯಿತು. ಜಿಲ್ಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳ ಗಮನ ಸೆಳೆಯಿತು. ಈ ವರ್ಷ ಇಲಾಖೆಯವರೇ ಸಂಘದ ಆಶ್ರಯದಲ್ಲಿ, ಒಂದೇ ಕೇಂದ್ರದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದ ಜಿಲ್ಲೆಯ ವಿವಿಧ ಭಾಗಗಳಿಂದ ಆರಿಸಿದ ವಿಷಯ ಸಂಪನ್ಮೂಲ ವ್ಯಕ್ತಿಗಳನ್ನು 'ಫೋನ್ ಇನ್' ಕೇಂದ್ರಕ್ಕೆ ಕರೆದು ವಿದ್ಯಾರ್ಥಿಗಳಿಗೆ ಅರ್ಥವಾಗಿಲ್ಲದ ವಿಷಯಗಳನ್ನು ದೂರವಾಣಿಯ ಮೂಲಕ ಅರ್ಥಮಾಡಿಸಲಾಯಿತು.

ಈ ಕಾರ್ಯಕ್ರಮದ ಯಶಸ್ಸನ್ನು ಕಂಡು ಇದೀಗ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಸಂಘದ ಪದಾಧಿಕಾರಿಗಳು ಈ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಿದರು.

ಜನವರಿ 17 ಮತ್ತು 18 ರಂದು ಬೆಂಗಳೂರು ನಗರ ಜಿಲ್ಲೆ, ದಾವಣಗೆರೆ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಪ್ರಾರಂಭವಾಯಿತು. ಅನೇಕ ದಿನಗಳವರೆಗೆ ಇದು ನಡೆಯಲಿದೆ. ಸಂಜೆ 6 ಗಂಟೆಯಿಂದ 8 ರವರೆಗೆ ಓರ್ವ ಶಿಕ್ಷಕರು ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡುತ್ತಾರೆ. ಈ ಜಿಲ್ಲೆಯ ಎಲ್ಲ 10ನೇ ತರಗತಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಇದರ ಸದುಪಯೋಗವನ್ನು ಪಡೆಯಬೇಕೆಂದು ಶಿಕ್ಷಕ ಸಂಘದ ಪದಾಧಿಕಾರಿಗಳು ವಿನಂತಿಸಿ ಕೊಂಡಿದ್ದಾರೆ. ●

**ನುಡಿ ಮುತ್ತು**


- **ಕಂಡ ಕನಸಿಗೆ ಕೊನೆಯ ಕ್ಷಣ ಅಂತಿರಬಾರದು. ನನಸಾಗುವವರೆಗೂ ಮುಂದುವರಿಯಲಿ, ನಂತರ ಇನ್ನೊಂದು ಹೊಸ ಕನಸಿಗೆ ಹಂಬಲಿಸೋಣ.**
- **ತಲೆಯಿಂದ ಬೇಡವಾದದ್ದನ್ನು ತೆಗೆದುಹಾಕುವುದಕ್ಕೆ ಜಾಣತನದ ಜೊತೆಗೆ ಧೈರ್ಯ ಬೇಕು. ಅದು ಸಾಧ್ಯವಾದಾಗ ತಲೆ ಎತ್ತಿ ನಡೆಯುವುದಕ್ಕೊಂದು ಅರ್ಥ ಬರುತ್ತದೆ.**

**ಅವಿಸ್ಮರಣೀಯರು**
**ಭಾಗ–3**

# ಗೆಂದಾಲಾಲ್ ದಿಕ್ಷಿತ್ ಅಪರೂಪದ ಅಜ್ಞಾತ ಕ್ರಾಂತಿಕಾರಿ


**ಭೀಮಸೇನ್ ಪುರೋಹಿತ್**
**ಡಾಟಾ ಸೈಂಟಿಸ್ಟ್**
**ಬೆಂಗಳೂರು**



ಭಾಳ ಅಂದ್ರೆ ಆ ಹುಡುಗನಿಗೆ 9–10 ವರ್ಷ ವಯಸ್ಸಿರಬಹುದು.. ಅವತ್ತೊಂದಿನ, ಬೆಳಗಿನ ನಸುಕಿನಲ್ಲಿಯೇ ಎದ್ದು, ತನ್ನೂರಿನಲ್ಲಿ ಹರಿಯುತ್ತಿದ್ದ ಯಮುನಾ ನದಿಗೆ ತೆರಳಿ ಸ್ನಾನ ಮಾಡಿ ಶುದ್ಧನಾದ. ಮಿಂದೆದ್ದು ಬಂದವನೇ, ದಡದ ಮೇಲಿದ್ದ ಕಾಳಿಯ ಗುಡಿಯೆಡೆ ಹೊರಟ. "ತಾಯೆ, ಆಂಗ್ಲರ ದುರಾಡಳಿತದಲ್ಲಿ ನಲುಗುತಿರುವ ದೇಶದ ಸ್ವಾತಂತ್ರ್ಯವೇ ನನ್ನ ಜೀವನದ ಧ್ಯೇಯ.. ನನ್ನ ಕೊನೆ ಉಸಿರಿನವರೆಗೂ, ಕೊನೆ ರಕ್ತದ ಹನಿ ಪುಟಿಯುವವರೆಗೂ ಭಾರತಿಯ ಸೇವೆಗಾಗಿ ನನ್ನ ಬದುಕು ಮುಡಿಪು", ಅಂತ ಆ ಸಣ್ಣ ಬಾಲಕ ಶಪಥಗೈದಿದ್ದ..!

ಅವನ ಹೆಸರು "ಗೆಂದಾಲಾಲ್ ದಿಕ್ಷಿತ್". 1888 ರಲ್ಲಿ, ಉತ್ತರ ಪ್ರದೇಶದ ಆಗ್ರಾ ಜಿಲ್ಲೆಯಲ್ಲಿ ಹಳ್ಳಿಯೊಂದರಲ್ಲಿ ಜನನ. ಸಣ್ಣವನಿಂದಲೂ ದೇಶಭಕ್ತಿಯನ್ನು ಮೈಗೂಡಿಸಿಕೊಂಡಿದ್ದವ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮುಗಿಸಿದ ಮೇಲೆ, ಆಂಗಿ (Dayananda Anglo Vedic) ಶಾಲೆಯಲ್ಲಿ ಶಿಕ್ಷಕನಾಗಿ ಸೇರಿಕೊಂಡ.

1905. 'ಒಡೆದು ಆಳುವ'ನೀತಿಯನ್ನೇ ಅನುಸರಿಸುತ್ತಿದ್ದ ಆಂಗ್ಲರ ಅಧಿಕಾರಿ "ಲಾರ್ಡ್ ಕರ್ಜನ್"ಬಂಗಾಳವನ್ನು ವಿಭಜಿಸಿದ. ಅವನ ಈ ಕೃತ್ಯಕ್ಕೆ ಇಡೀ ದೇಶವೇ ಎದ್ದು ನಿಂತಿತು. ಎಲ್ಲೆಲ್ಲೂ ಹರತಾಳ, ಮೆರವಣಿಗೆ, ಹೋರಾಟಗಳು ನಡೆದವು. ತಿಲಕರಂತೂ ತಮ್ಮ ಕೇಸರಿ ಪತ್ರಿಕೆಯಲ್ಲಿ ಪ್ರತಿದಿನ, ಬಂಗಾಳ–ವಿಭಜನೆಯ ವಿರುದ್ಧ ಬೆಂಕಿಯ ಬರಹಗಳನ್ನು ಪ್ರಕಟಿಸ್ತಿದ್ರು. ಅದರ ಕಿಡಿ, ಗೆಂದಾಲಾಲನಿಗೂ ಬಡಿಯಿತು. ತಿಲಕರಿಂದ ತುಂಬಾ ಸ್ಫೂರ್ತಿಗೊಂಡ ಗೆಂದಾಲಾಲ್, ಅವರು ಶುರುಮಾಡಿದ ಶಿವಾಜಿ–ಉತ್ಸವ, ಸಾರ್ವಜನಿಕ ಗಣೇಶ–ಉತ್ಸವ ಇದರಿಂದಲೂ ಪ್ರಭಾವಿತನಾದ. ಶಿವಾಜಿಯ ಚರಿತೆಯನ್ನು ಓದಿ, ಆ ಛತ್ರಪತಿಯ ಸಂಘಟನಾ ಕೌಶಲ್ಯ, ಧೈರ್ಯಗಳಿಂದ ಉತ್ತೇಜಿತಗೊಂಡ. ಗೆಂದಾಲಾಲ್ ಸಣ್ಣವನಿದ್ದಾಗ ಮಾಡಿದ್ದ ಪ್ರತಿಜ್ಞೆ ಈಡೇರುವ ಕಾಲ ಆಗ ಬಂದಿತ್ತು.. ಅದರ ಫಲವೇ, ಭಾರತದ ಕ್ರಾಂತಿ ಇತಿಹಾಸದಲ್ಲಿ, ಮತ್ತೊಂದು ಕ್ರಾಂತಿ ಸಂಘಟನೆಯ ಜನನ. ಅದುವೇ ಗೆಂದಾಲಾಲನ "ಶಿವಾಜಿ ಸಮಿತಿ".

ಮೊದಮೊದಲು ಗೆಂದಾಲಾಲ್, ಊರಿನ ವಿದ್ಯಾವಂತರನ್ನ, ಶ್ರೀಮಂತರನ್ನ ಸೇರಿಸಿಕೊಂಡು ಸಂಘಟನೆ ಬೆಳೆಸುವ ಉತ್ಸಾಹದಲ್ಲಿದ್ದ. ಆದರೆ ಆತ ಕಂಡಿದ್ದು ನಿರಾಶೆ. ಬ್ರಿಟಿಷರ ಆಂಗ್ಲ ಶಿಕ್ಷಣದಲ್ಲಿ ಬೆಳೆದಿದ್ದ ವಿದ್ಯಾವಂತರೆಲ್ಲ, ಭಾರತದ ಬಗ್ಗೆ ಕಿಂಚಿತ್ತೂ ಗೌರವ ಉಳಿಸಿ ಕೊಂಡಿರಲಿಲ್ಲ. ಆಂಗ್ಲರು ಭಾರತದ ಉದ್ಧಾರಕ್ಕಾಗಿಯೇ ಬಂದಿದ್ದಾರೆ ಎಂಬ ಭ್ರಮೆಯಲ್ಲಿದ್ದರು.. ಜೊತೆಗೆ ಊರಿನ ಶ್ರೀಮಂತರೂ ಆಂಗ್ಲರ ಬಾಲಬಡುಕರಾಗಿದ್ದರು. ಹೀಗಾಗಿ ಗೆಂದಾಲಾಲನಿಗೆ ಯಾವ ಸಹಾಯವೂ ಸಿಗಲೇ ಇಲ್ಲ..

ಆಗ ಅವನಿಗೆ ಹೊಳೆದದ್ದೆ ಚಂಬಲ್ ಕಣಿವೆ.. ಕಳ್ಳ–ಕಾಕರ ಪ್ರಸಿದ್ಧ ತಾಣ, ಚಂಬಲ್ ಕಣಿವೆ ಇದ್ದದ್ದು ಅಲ್ಲೇ. ಅಲ್ಲಿನ ಡಕಾಯಿತರನ್ನೇ ಸೇರಿಸಿಕೊಂಡು ಸಂಘಟನೆ ಕಟ್ಟುವ ಸಂಕಲ್ಪ ಮಾಡಿದ. ಅಂಥ ವಿಚಾರ ಬಂದೊಡನೆ, ಚಂಬಲ್ ಕಣಿವೆಗೆ ಹೊರಟು ನಿಂತ. ಅಂಥಾ ಕಡಿದಾದ ಕಣಿವೆಯಲ್ಲಿ ಸಂಚರಿಸುವುದು ಅದೇನೂ ಅಷ್ಟು ಸಣ್ಣ ಕೆಲಸವಾಗಿರಲಿಲ್ಲ. ಆದರೂ ದೇಶಕ್ಕಾಗಿ ದುಡಿಯಲೆಬೇಕೆಂಬ ಇಚ್ಛೆ ಅವನಲ್ಲಿ ಭೀಮಬಲ ತುಮ್ಬಿಸಿತ್ತು. ಅಲ್ಲಿನ ಡಕಾಯಿತರನ್ನ ಭೇಟಿ ಮಾಡಿ ಅವರ ಮನವೊಲಿಸುವ ಕೆಲಸ ಮಾಡಿದ.

ವಾಸ್ತವದಲ್ಲಿ ಅಲ್ಲಿನ ಅನೇಕ ಡಕಾಯಿತರು ಮೂಲತಃ ಕ್ರೂರಿಗಳಲ್ಲ. ಆಂಗ್ಲರ ದಬ್ಬಾಳಿಕೆಗೆ, ಸಮಾಜದ ಕೆಲವು ಹುಳುಕುಗಳಿಗೆ ನೊಂದು, ಬೇಸತ್ತು, ಆಕ್ರೋಶದಿಂದ ಕಳ್ಳರಾದವರು. ಆ ವಿಷಯ ಗೆಂದಾಲಾಲನಿಗೂ ಗೊತ್ತಿತ್ತು. ಹೀಗಾಗಿಯೇ, ಅವರನ್ನು ಬ್ರಿಟಿಷರ ವಿರುದ್ಧ ಸಂಘಟಿಸುವುದು, 'ಶಿಕ್ಷಕ'ನಾಗಿದ್ದ ಅವನಿಗೆ ಅಷ್ಟೇನೂ ಕಷ್ಟವಾಗಲಿಲ್ಲ.. ಪ್ರತಿನಿತ್ಯ 'ಶಿವಾಜಿ', 'ಮಹಾರಾಣಾ ಪ್ರತಾಪ ಸಿಂಹ', 'ಝಾನ್ಸಿಯ ರಾಣಿ'ಯ ಕಥೆಗಳನ್ನು ಹೇಳಿ, ಆ ಕಳ್ಳರ ಮನಸ್ಸನ್ನು ದೇಶಭಕ್ತಿಯೆಡೆ ಪರಿವರ್ತಿಸಿದ. ಹೀಗೆ ಸಂಘಟನೆಯನ್ನು ಕಟ್ಟಿ ಬ್ರಿಟಿಷರ ವಿರುದ್ಧ ನಿರಂತರ ಯುದ್ಧ ಸಾರಿದ. ಅನೇಕ ಅಧಿಕಾರಿಗಳ ಮನೆಗಳ ದರೋಡೆಯನ್ನೂ ಮಾಡಿದ. ಗೆನ್ದಾಲಾಲ್ ಆಂಗ್ಲರಿಗೆ ಬೆಮ್ಬತ್ತಿದ ಬೇತಾಳದಂತೆ ಆಗಿದ್ದ.

ಆಗಲೇ, ಮತ್ತೊಂದು ಬೆಳವಣಿಗೆ ಆ ಪ್ರಾಂತದಲ್ಲಾಯಿತು. ರಾಮ್ ಪ್ರಸಾದ್ ಬಿಸ್ಮಿಲ್ ಆಗಿನ್ನೂ ಯುವಕ. ಅವನು ಷಹಜಹಾನ್ ಪುರದಲ್ಲಿ, "ಮಾತೃವೇದಿ"ಎಂಬ ಕ್ರಾಂತಿ ಸಂಘಟನೆ ಕಟ್ಟಿ, ಕಾರ್ಯ ನಿರ್ವಹಿಸುತ್ತಿದ್ದ. ಬಿಸ್ಮಿಲ್ಲನಿಗೆ, ಸ್ವಾಮೀ ಸೋಮದೇವರಿಂದ ಈ ಗೆನ್ದಾಲಾಲನ ಬಗ್ಗೆ ತಿಳಿಯಿತು. ಕೂಡಲೇ, ಬಿಸ್ಮಿಲ್, ಗೆನ್ದಾಲಾಲ್‌ನನ್ನು ಸಂಧಿಸಿ ತನಗೆ ಮಾರ್ಗದರ್ಶನ ನೀಡಬೇಕೆಂದು ಕೋರಿದ.. ಕ್ರಾಂತಿಯ ಬಗ್ಗೆ ಚರ್ಚೆ ನಡೆಸಿದ.. ಗೆನ್ದಾಲಾಲನಿಗೂ ಬಿಸ್ಮಿಲ್ಲನ ಪರಿಚಯ ಇನ್ನಷ್ಟು ಬಲ ತಂದಿತು.. ಇಬ್ಬರೂ ಕೂಡಿ ಮತ್ತೆ ಸಂಘಟನೆಯನ್ನು ಬಲಗೊಳಿಸಿದರು.

ಮಣಿಪುರಿ ಅನ್ನೋ ಗ್ರಾಮ. ಅಲ್ಲಿ ಬಿಸ್ಮಿಲ್ ಜನರನ್ನು ಸಂಘಟಿಸಲು, "ಮಣಿಪುರಿಯ ಪ್ರತಿಜ್ಞೆ"ಎಂಬ ಕರಪತ್ರ ಹಂಚಿದ. ಜೊತೆಗೆ ಗೆನ್ದಾಲಾಲನ ಜೊತೆಗೂಡಿ, ಮಣಿಪುರಿಯ ಕೆಲವು ಶ್ರೀಮಂತರ ಮನೆಗಳ ಮೇಲೆ, ದಾಳಿಯೂ ಆಯಿತು.. ಆದರೆ, ಜೊತೆಗೆ ಬ್ರಿಟಿಷರೂ ಎಚ್ಚೆತ್ತರು. ಈ ಕ್ರಾಂತಿಕಾರಿಗಳನ್ನು ಬಂಧಿಸಲು ಬಲೆ ಬೀಸಿದರು. ಅದರ ಸುಳಿವು ಸಿಕ್ಕ ಕೂಡಲೇ, ಬಿಸ್ಮಿಲ್ ಭೂಗತನಾದ. ಆದರೆ ಗೆನ್ದಾಲಾಲ್ ಸೆರೆ ಸಿಕ್ಕುಬಿಟ್ಟ.

**ಪುಟ 10 ಕ್ಕೆ ➤**

**ಗಾಂಧೀಜಿ 150**
**ಮಾಲಿಕೆ-4**

# ಬೆಳೆಯುವ ಸಿರಿ ಮೊಳಕೆಯಲ್ಲಿ

■ ಶ್ವೇತಾದ್ರಿ
ನಿವೃತ್ತ ಮುಖ್ಯ ಶಿಕ್ಷಕರು

ಹಿಂದಿನ ಮೂರು ಸಂಚಿಕೆಗಳಲ್ಲಿ ಉಪಾಧ್ಯಾಯರಾಗಿ ಗಾಂಧೀಜಿಯವರ ಅನುಭವ, ಆ ಮೂಲಕ ಶಿಕ್ಷಕ ವೃಂದ ಅನುಸರಿಸಬಹುದಾದ ಆದರ್ಶಗಳನ್ನು ಹಂಚಿಕೊಳ್ಳಲು ಪ್ರಯತ್ನಿಸಲಾಯಿತು. ಈ ಸಂಚಿಕೆಯಲ್ಲಿ ಮೋಹನದಾಸ ಕರಂಚಂದ ಗಾಂಧಿಯವರ ವಿದ್ಯಾರ್ಥಿ ದೆಸೆಯಲ್ಲಿನ ಘಟನೆಯನ್ನು ನೆನಪಿಸಿಕೊಳ್ಳೋಣ.

ಮೋ. ಕ. ಗಾಂಧಿಯವರು ಪ್ರೌಢಶಾಲೆಯ ಮೊದಲನೆಯ ವರ್ಷದ ಪರೀಕ್ಷೆಯ ವೇಳೆಯಲ್ಲಿ ನಡೆದ ಘಟನೆ ಇದು. ಗಾಂಧಿಯವರಿದ್ದ ತರಗತಿಗೆ ಶಾಲಾ ತನಿಖಾಧಿಕಾರಿ ಮಿ. ಗೈಲ್ಸ್ ಸಾಹೇಬರು ಪರಿಶೀಲನೆಗಾಗಿ ಬಂದಿದ್ದರು. ಅವರು ವಿದ್ಯಾರ್ಥಿಗಳಿಗೆ ಐದು ಪದಗಳನ್ನು ಬರೆಯಲು ಕೊಟ್ಟರು. ಅವುಗಳಲ್ಲಿ ಕೆಟಲ್ (Kettel) ಒಂದು. ಮೋ. ಕ. ಗಾಂಧಿ ಈ ಪದವನ್ನು ತಪ್ಪಾಗಿ ಬರೆದರು. ಉಳಿದ ವಿದ್ಯಾರ್ಥಿಗಳು ಸರಿಯಾಗಿ ಬರೆದಿದ್ದರು. ಇದನ್ನು ಗಮನಿಸಿದ ಉಪಾಧ್ಯಾಯರು ಮುಂದಿನ ಹುಡುಗನ ಸ್ಲೇಟನ್ನು ನೋಡಿಕೊಂಡು ತಪ್ಪಾಗಿ ಬರೆದುದನ್ನು ಸರಿಪಡಿಸಿ ಬರೆಯುವಂತೆ ತಮ್ಮ ಪಾದರಕ್ಷೆಯ ತುದಿಯಿಂದ ತಿವಿದು ಎಚ್ಚರಿಸಿದರು. ಆದರೆ ಗಾಂಧಿಯವರಿಗೆ ಕಾಪಿ ಮಾಡಿ ಬರೆಯುವುದು ಸರಿ ಎನಿಸಲಿಲ್ಲ. ಕಾಪಿ ಮಾಡದೆ ತಮಗೆ ತಿಳಿದಂತೆಯೇ ಬರೆದರು. ಉಪಾಧ್ಯಾಯರ ದೃಷ್ಟಿಯಲ್ಲಿ ಮೋ. ಕ. ಗಾಂಧಿ ಒಬ್ಬನೇ ದಡ್ಡ. ಹಾಗಾಗಿ ಅವನ ಮೂರ್ಖತನವನ್ನು ತೋರಿಸಲು ಶಿಕ್ಷಕರು ಪ್ರಯತ್ನಪಟ್ಟರು. ಆದರೆ ಅದು ಗಾಂಧಿಯವರ ಮೇಲೆ ಪ್ರಭಾವ ಬೀರಲಿಲ್ಲ. ಕೊನೆಗೂ ಕಾಪಿ ಮಾಡುವ ಕಲೆ ತಮಗೆ ಬರಲೇ ಇಲ್ಲ ಎಂದು ಗಾಂಧಿಯವರು ಹೇಳುತ್ತಾರೆ. ಕಾಪಿ ಮಾಡದಂತೆ ವಿದ್ಯಾರ್ಥಿಗಳನ್ನು ನೋಡಿಕೊಳ್ಳುವುದು ಶಿಕ್ಷಕರ ಕೆಲಸ ಎಂಬುದು ಅವರ ನಿಲುವು. ಇಷ್ಟಾದರೂ ಆ ಉಪಾಧ್ಯಾಯರ ಬಗೆಗಿನ ಗೌರವ ಅವರಿಗೆ ಕಡಿಮೆಯಾಗಲಿಲ್ಲ ಎಂಬುದು ಬಹಳ ಮುಖ್ಯ. ಪ್ರಾಮಾಣಿಕತೆ, ಹಿರಿಯರಿಗೆ ಗೌರವಿಸುವ ಗುಣ ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮೋ. ಕ. ಗಾಂಧಿಯವರಲ್ಲಿ ಬಾಲ್ಯದಲ್ಲೇ ಚಿಗುರೊಡೆದಿತ್ತು.

ಈ ಘಟನೆ ಎಲ್ಲರಿಗೂ ಪರಿಚಿತವಾದುದೇ. ಇಲ್ಲಿ ಗಮನಿಸಬೇಕಾದುದು ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಕಾಪಿ ಮಾಡದೆ ಪ್ರಾಮಾಣಿಕವಾಗಿ ಉತ್ತರಿಸಬೇಕು ಎಂಬುದು ಒಂದು ಕಡೆಯಾದರೆ, ಉಪಾಧ್ಯಾಯರ ಕರ್ತವ್ಯ, ಜವಾಬ್ದಾರಿಯ ಬಗೆಗೆ ಯೋಚಿಸಬೇಕಾದುದು ಇನ್ನೂ ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತದೆ. ವಿದ್ಯಾರ್ಥಿಗಳು ಕಾಪಿ ಮಾಡದಂತೆ ನೋಡಿಕೊಳ್ಳುವುದು ಉಪಾಧ್ಯಾಯರ ಕೆಲಸ ಎಂದು ಈ ಘಟನೆಯಲ್ಲಿ ಮೋ. ಕ. ಗಾಂಧಿಯವರು ಭಾವಿಸಿದ್ದಾರೆ. ಅದರಲ್ಲಿ ಬೇರೆ ಮಾತೇ ಇಲ್ಲ. ಶಿಕ್ಷಕರು ತನಿಖಾಧಿಕಾರಿಯಿಂದ ಮೆಚ್ಚುಗೆ ಗಳಿಸಲು ಅಥವಾ ಕಟು ವಿಮರ್ಶೆಯಿಂದ ಪಾರಾಗಲು ವಿದ್ಯಾರ್ಥಿಗೆ ಅಪ್ರಾಮಾಣಿಕನಾಗುವಂತೆ ಸೂಚಿಸುವುದು ಎಷ್ಟು ಸರಿ? ಇಂದು ಶಿಕ್ಷಣದಲ್ಲಿ ಫಲಿತಾಂಶಕ್ಕೇ ಪೂರ್ಣ ಪ್ರಾಮುಖ್ಯತೆ. ಫಲಿತಾಂಶದ ಕಡೆಗೇ ಒತ್ತುಕೊಡುವ, ಶಾಲೆಯ ಫಲಿತಾಂಶವೇ ಸಂಸ್ಥೆಯ ಸರ್ವಸ್ವ ಎಂದು ಭಾವಿಸುವ ಆಡಳಿತ ಮಂಡಲಿ, ಪೋಷಕರು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸರ್ಕಾರ, ವಿದ್ಯಾರ್ಥಿಗಳು ಎಲ್ಲರೂ ಈ ಘಟನೆಯ ಬಗೆಗೆ ಪ್ರಾಮಾಣಿಕವಾಗಿ ಚಿಂತಿಸಿ ಕಾರ್ಯಪ್ರವೃತ್ತರಾಗುವ ಅಗತ್ಯತೆ ಬಹಳಷ್ಟಿದೆ ಎಂದೆನಿಸುವುದಲ್ಲವೇ?

●

➢ ಪುಟ 9 ರಿಂದ..... ಗೆಂದಾಲಾಲ್ ದಿಕ್ಷಿತ್...

ವಿಚಾರಣೆ ಶುರುವಾಯಿತು. ಸಂಘಟನೆಯ ಬಗ್ಗೆ ತಿಳಿದುಕೊಳ್ಳಲು ಆಂಗ್ಲರು ಅನೇಕ ವಿಧದ ಪ್ರಯೋಗ ನಡೆಸಿದರು. ಕೊನೆಗೆ ಗೆನ್ದಾಲಾಲ್ ಒಂದು ಉಪಾಯ ಮಾಡಿ, ತನ್ನ ಸಂಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಕೊಡಲು ಒಪ್ಪಿಕೊಂಡ.. ಅದನ್ನು ನಂಬಿದ ಆಂಗ್ಲರು, ಗೆನ್ದಾಲಾಲನನ್ನು, ಉಳಿದ ಬಂಧಿತ ಕ್ರಾಂತಿಕಾರಿಗಳ ಜೊತೆ ಇಟ್ರು. ಅದೇ ಸಮಯಕ್ಕೆ ಕಾಯುತ್ತಿದ್ದ ಗೆನ್ದಾಲಾಲ್ ಉಳಿದ ಸಹಚರರ ಸಹಾಯದೊಂದಿಗೆ, ಜೈಲಿನಿಂದ ತಪ್ಪಿಸಿಕೊಂಡುಬಿಟ್ಟ...

ಆನಂತರ, ಭೂಗತನಾದ ಗೆನ್ದಾಲಾಲನನ್ನು ಹಿಡಿಯಲು, ಬ್ರಿಟಿಷರು ಮಾಡಿದ ಎಲ್ಲ ಪ್ರಯತ್ನಗಳೂ ವಿಫಲವಾದವು. ಕೊನೆಗೂ ಆತ ಸಿಗಲೇ ಇಲ್ಲ. ಇಷ್ಟರಲ್ಲೇ ಅವನಿಗೆ ಮಾರಣಾಂತಿಕ ಕ್ಷಯ ರೋಗ ತಗುಲಿಬಿಟ್ಟಿತು.. ಅದಕ್ಕೆ ಅವನ ನಿರಂತರವಾದ ಕೆಲಸವೇ ಕಾರಣ.

ಚಂಬಲ್ ಕಣಿವೆಯಲ್ಲಿ, ಡಕಾಯಿತರನ್ನು ಸಂಘಟಿಸುವಾಗ, ತನ್ನ ಆರೋಗ್ಯದ ಪರಿವೆಯೂ ಇಲ್ಲದೆ, ಸತತ ಅಲೆದಾಟ, ಅದೂ ಪಾದರಕ್ಷೆಗಳೂ ಇಲ್ಲದೆ, ಊಟ-ನೀರು ಇಲ್ಲದೆ ಅದೆಷ್ಟೋ ದಿನ ಉಪವಾಸದಲ್ಲೇ ದಿನವನ್ನೂ ದೂಡಿದ್ದ.

ಇಷ್ಟೆಲ್ಲಾ ಕಷ್ಟಗಳನ್ನೂ ಸಹಿಸಿದ್ದು ದೇಶಕ್ಕಾಗಿಯೇ, ತನ್ನ ಪ್ರತಿಜ್ಞೆಗಾಗಿಯೇ. ಅವೆಲ್ಲದರ ರೂಪವಾಗಿ TB ತಗುಲಿತು. ಹೇಗೋ ಅವನನ್ನು ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಯಿತು. ಆತನ ಹೆಂಡತಿಯೂ ಸೇವೆಗಾಗಿ ಬಂದಳು. ಆದರೆ, ಅದು ಮಾರಣಾಂತಿಕ ಕಾಯಿಲೆ, ಅವನು ಬದುಕುಳಿಯುವುದು ಸಾಧ್ಯವಿರಲಿಲ್ಲ. ಅವನ ಹೆಂಡತಿಯ ಮನವೊಲಿಸಿ, ಮನೆಗೆ ಕಳಿಸಲಾಯಿತು.

ಕೊನೆಗೆ 1920 ಡಿಸೆಂಬರ್ 21 ಕ್ಕೆ ಆ ರೋಗದ ನರಳುವಿಕೆಯಲ್ಲಿಯೇ ಆಸ್ಪತ್ರೆಯಲ್ಲಿ ಅಸುನೀಗಿದ. ಜೀವನದುದ್ದಕ್ಕೂ ಯಾವ ಸಂಸಾರದ ಸುಖವನ್ನೂ ಬಯಸದೆ, ತನ್ನ ಶಪಥದಂತೆ ಬದುಕಿದ ವ್ಯಕ್ತಿ ಆತ. ಕೇವಲ ಸ್ವಾತಂತ್ರ್ಯಕ್ಕಾಗಿ ಅಲ್ಲದೆ, ಸಮಾಜವಿರೋಧಿಗಳಾಗಿದ್ದ ಡಕಾಯಿತರನ್ನು ಮತ್ತೆ ಸಂಸ್ಕೃತಿಯ ದಾರಿಗೆ ತಂದ ಅಪರೂಪದ ಕ್ರಾಂತಿಕಾರಿ ಆತ. ಆದರೆ ಎಲ್ಲ ಇತಿಹಾಸದಿಂದ ಅಜ್ಞಾತವಾಗಿಯೇ ಉಳಿದುಹೋದ.

ಆ ಪುಣ್ಯಚೇತನಕ್ಕೆ, ಅನಂತ ಪ್ರಣಾಮಗಳನ್ನು ಸಲ್ಲಿಸುತ್ತಾ, ಅವನ ರಾಷ್ಟ್ರಭಕ್ತಿ ನಮಗೆ ಪ್ರೇರಣೆಯಾಗಲಿ ಎಂಬ ಹಾರೈಕೆಯೊಂದಿಗೆ..

ವಂದೇ ಮಾತರಂ..

●

# ರಾಜ್ಯದ ವಿವಿಧೆಡೆ ನಡೆದ ಸಂಕಲ್ಪ ದಿನಾಚರಣೆ ಮತ್ತು ಫೋನ್ ಇನ್ ಕಾರ್ಯಕ್ರಮ



















ಶಿಕ್ಷಕರಿಗೆ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಕಾರ್ಯಾಗಾರ ಮತ್ತು ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮವು ಧಾರವಾಡದಲ್ಲಿ ನಡೆಯಿತು.

MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026

Date of Publishing : 17-01-2020 Date of Posting 20h or 21st of every month Posted at Periodical Rate

# ದಿ. ನಾಡೋಜ ಚಿದಾನಂದ ಮೂರ್ತಿ ಅವರೊಂದಿಗಿನ ನೆನಪು




ಹುಬ್ಬಳ್ಳಿ: ಲೇಖಕ, ಚಿಂತಕ, ಸಂಶೋಧಕ ಮತ್ತು ಇತಿಹಾಸಕಾರರಾಗಿದ್ದ ಚಿದಾನಂದ ಮೂರ್ತಿಯವರು ಇನ್ನಿಲ್ಲ ಎಂಬ ವಿಷಯ ನೋವಿನದ್ದು. ಹಂಪೆಯ ಸ್ಮಾರಕಗಳನ್ನು ಉಳಿಸುವಲ್ಲಿ ಹಾಗೂ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಸಿಗುವಲ್ಲಿ ಇವರ ಪ್ರಯತ್ನ ಎಂದಿಗೂ ಸ್ಮರಣೀಯ, ಈ ವಿಶೇಷ ಪ್ರತಿಭೆಯನ್ನು ಕಳೆದುಕೊಂಡಿರುವುದು ಕರ್ನಾಟಕಕ್ಕೆ ತುಂಬಲಾರದ ನಷ್ಟವಾಗಿದೆ.

ಮಾಧ್ಯಮಿಕ ಶಿಕ್ಷಕಕ ಸಂಘವು 2017ರಲ್ಲಿ ಬೆಂಗಳೂರಿನಲ್ಲಿ ಜರುಗಿದ ರಾಷ್ಟ್ರಮಟ್ಟದ ಶಿಕ್ಷಾ ಭೂಷಣ (ಶ್ರೇಷ್ಠ ಶಿಕ್ಷಕರಿಗೆ ಕೊಡುವ 1 ಲಕ್ಷ ನಗದು ಹಾಗೂ ಫಲಕ) ಪ್ರಶಸ್ತಿಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಶ್ರೀ ಭಯ್ಯಾಜೀ ಜೋಶಿಯವರಿಂದ ಚಿದಾನಂದ ಮೂರ್ತಿಯವರಿಗೆ ಕೊಡಮಾಡಿತ್ತು.

ಚಿದಾನಂದ ಮೂರ್ತಿಯವರು ಹುಟ್ಟಿದ್ದು ಚನ್ನಗಿರಿ ತಾಲೂಕಿನ ಹಿರೇಕೋಗಲೂರು ಗ್ರಾಮದಲ್ಲಿ 1931ರ ಮೇ 10ರಂದು. ಅವರ ತಂದೆ ಕೊಟ್ಟೂರಯ್ಯ ಹಾಗೂ ತಾಯಿ ಪಾರ್ವತಮ್ಮ. ತಂದೆ ಶಿಕ್ಷಕರಾಗಿದ್ದವರು. ಮನೆಯೇ ಮೊದಲ ಪಾಠ ಶಾಲೆಯಾಗಿತ್ತು. ಬಾಲ್ಯದ ಶಿಕ್ಷಣ ಹಿರೇಕೋಗಲೂರು ಹಾಗೂ ಸಂತೆಬೆನ್ನೂರಿನಲ್ಲಿ ಪೂರೈಸಿದ ಅವರು ನಂತರದ ದಿನಗಳಲ್ಲಿ ದಾವಣಗೆರೆಯ ಜಯದೇವ ಹಾಸ್ಟೆಲ್‌ನಲ್ಲಿದ್ದುಕೊಂಡು ತಮ್ಮ ವಿದ್ಯಾಭ್ಯಾಸ ನಡೆಸಿದ್ದರು. ಮುಂದೆ ಉನ್ನತ ಶಿಕ್ಷಣಕ್ಕಾಗಿ ಮೈಸೂರಿಗೆ ತೆರಳಿ ತಮ್ಮ ವಿದ್ಯಾಭ್ಯಾಸ ಮುಂದುವರೆಸಿದರು. ಸತತ 40 ವರ್ಷಗಳಿಂದಲೂ ಕನ್ನಡಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡವರು. ಕನ್ನಡದ ಉತ್ತಮ ಅಧ್ಯಾಪಕರಾಗಿ ಸಹಸ್ರಾರು ವಿದ್ಯಾರ್ಥಿಗಳಿಗೆ ಕನ್ನಡ ಕಲಿಸಿದರು

ಕನ್ನಡ ಶಕ್ತಿ ಕೇಂದ್ರದ ಮೂಲಕ ಕನ್ನಡಿಗರನ್ನು ಸಂಘಟಿತರನ್ನಾಗಿಸುವ ಕೆಲಸ ಮಾಡಿದವರು. ಇತಿಹಾಸ ಸಂಶೋಧನೆಯ ಪುಸ್ತಕಗಳನ್ನು ಬರೆದಿರುವ ಚಿದಾನಂದ ಮೂರ್ತಿಯವರದು ಬದ್ದತೆ, ಚಿಂತನೆಯ ವ್ಯಕ್ತಿತ್ವ. “ಪ್ರಶಸ್ತಿ ಸ್ವೀಕರಿಸಿ ಮಾತನಾಡುವ ಸಕ್ಕರೆ ಲೇಪಿತ ಮಾತುಗಳು ಇರಲಿ, ಸರಿಯಾಗಿ ತಯಾರು ಮಾಡಿ ಒಂದು **Learned speech** ಮಾಡಿ ಎಂದು ಭೈರಪ್ಪನವರು” ತಿಳಿಸಿದ್ದರಂತೆ. ಹಾಗೆಯೇ ತಯಾರು ಮಾಡಿ ಬಂದಿದ್ದರು. ರಿಲಿಜನ್ ಮತ್ತು ಧರ್ಮ, ಕರ್ನಾಟಕದಲ್ಲಿ ಆಗೊಮ್ಮೆ ಈಗೊಮ್ಮೆ ಎದ್ದೇಳುವ ಪ್ರತ್ಯೇಕತೆಯ ಚರ್ಚೆಯ ಕುರಿತು ಶೋಧಬದ್ಧ ಮಾತುಗಳನ್ನಾಡಿದರು.

ಅವರು ಕಟ್ಟಿ ಮುನ್ನಡೆಸಿದ ಹೋರಾಟಗಳು ಸ್ವಹಿತಾಸಕ್ತಿಯದ್ದಾಗಿರಲಿಲ್ಲ. ಹೋರಾಟಕ್ಕೆ ಬೇಕಾದ ಬೌದ್ಧಿಕ ತಯಾರಿಯು ಜಾಳುಜಾಳಾಗಿರುತ್ತಿರಲಿಲ್ಲ. ಆಳವೂ ವಿವರವೂ ಆಗಿರುತ್ತಿದ್ದವು. **Depth and details** ನಲ್ಲಿ ಯಾವ ರಾಜಿಯೂ ಇರುತ್ತಿರಲಿಲ್ಲವೆಂಬುದು ಅನೇಕರಿಗೆ ತಿಳಿದಿರುವ ವಿಷಯವೇ.

ಒಂದು ವಯಸ್ಸು, ಒಂದಷ್ಟು ಅನುಭವ, ತಕ್ಕಮಟ್ಟಿನ ಪ್ರಸಿದ್ಧಿ ಸಿಕ್ಕ ಕೂಡಲೇ ಬದಲಾಗುವ ಚರ್ಯೆ, ಮಾತು, ಮೂಗು ಮೇಲೆ ಮಾಡಿಯೇ ಇರುವಿಕೆಯು ಸಾಮಾನ್ಯವಾಗಿ ಕಾಣುವ ಸ್ವಭಾವಗಳು. ಇದಕ್ಕೆ ಹೊರತಾದ ವ್ಯಕ್ತಿತ್ವ ಚಿಮೂ ಅವರದ್ದು. ಕಲಿಯುವಿಕೆ, ಕುತೂಹಲ, ವಿದ್ಯಾರ್ಥಿತನವೆಂಬ ಅಪರೂಪದ ಗುಣಗಳನ್ನು ರೂಢಿಸಿಕೊಳ್ಳುವುದು ಸುಲಭವಲ್ಲ. ಇದೆಲ್ಲವೂ ಮೂರ್ತಿಗಳ ವ್ಯಕ್ತಿತ್ವದ ಸಹಜಾಂಶಗಳು. ಇನ್ನೊಬ್ಬರಿಗೆ ಮಾರ್ಗದರ್ಶನ ಮಾಡುವ ಹಪಹಪಿಕೆಗೆ ತುತ್ತಾಗದೆ ಕಾಯಕ ಮಾಡಿದ ಬೌದ್ಧಿಕ ಯೋಗಿ. ಹಾಗೆ, ಅವರ ಬದುಕು ಮಾರ್ಗದರ್ಶಿ. ಇನ್ನವರಿಲ್ಲ. ನೆನಪು ಮಾಡಿಕೊಂಡಾಗ ಸಹಜತೆ, ಸರಳತೆ, ಬೌದ್ಧಿಕ ಪರಿಶ್ರಮದಂತಹ ಅನುಕರಣ ಯೋಗ್ಯ ಗುಣಗಳ "ಮೂರ್ತಿರೂಪ" ಚಿಮೂ.

ದೈವಾಧೀನರಾದ ಅವರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಸಂತಾಪವನ್ನು ಸೂಚಿಸಿ ಮೌನಾಚರಣೆ ಆಚರಿಸಿತು. ಈ ಸಂದರ್ಭದಲ್ಲಿ ಎ ಬಿ ಆರ್ ಎಸ್ ಎಂ ನ ರಾಷ್ಟ್ರೀಯ ಕಾರ್ಯದರ್ಶಿ ಶಿವಾನಂದ ಸಿಂದನಕೇರಾ, ಕೆ ಆರ್ ಎಂ ಎಸ್ ಎಸ್ ನ ರಾಜ್ಯಾಧ್ಯಕ್ಷ ಸಂದೀಪ ಬೂದಿಹಾಳ, ಎಂ ಎಲ್ ಸಿ ಅರುಣ ಶಹಾಪೂರ, ಪ್ರಧಾನ ಕಾರ್ಯದರ್ಶಿ ಚಿದಾನಂದ ಪಾಟೀಲ, ಸಹ ಪ್ರಧಾನ ಕಾರ್ಯದರ್ಶಿ ಗಂಗಾಧರಾಚಾರಿ ಹಾಗೂ ಇತರರು ಸಂತಾಪ ಸೂಚಿಸಿದರು.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
‘Keshava Shilpa’, Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, ‘Yadavasmurthi’, 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com